

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 07 Issue : 59 Thursday 07-11-2024 E-mail : maruti.b.hosamani76@gmail.com Page: 4 Price : Rs. 1/-


## ಕಿತ್ತೂರು ವೀರರಾಣಿ ಚೆನ್ನಮ್ಮನ 200ನೇ ವರ್ಷದ ವಿಜಯೋತ್ಸವ ಸಮಾವೇಶ



ಸಿಹಿ ಕಹಿ ಸುದ್ದಿ,

**ರಾಂಪುರ** : ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ರಾಂಪುರ ಗ್ರಾಮದ ಪತ್ನಿ ಬಸಪ್ಪ ಕಲ್ಯಾಣ ಮಂಟಪದಲ್ಲಿ ಕಿತ್ತೂರು ವೀರರಾಣಿ ಚೆನ್ನಮ್ಮನ 200 ನೇ. ವರ್ಷದ ವಿಜಯೋತ್ಸವ. ಸಮಾವೇಶವನ್ನು ಹಮ್ಮಿಕೊಂಡಿದ್ದು ಈ ಸಮಾವೇಶಕ್ಕೆ ವೀರಶೈವ ಪಂಚಮಸಾಲಿ ಲಿಂಗಾಯತ ಸಮಾಜದ ವಚನಾನಂದ ಸ್ವಾಮಿಗಳು ಭಾಗವಹಿಸಿದ್ದು ಮತ್ತು ಕ್ಷೇತ್ರದ ಎನ್.ವೈ ಗೋಪಾಲಕೃಷ್ಣ ಶಾಸಕರು ಪಾಲ್ಗೊಂಡು ಜ್ಯೋತಿ ಬೆಳಗಿಸಿ ಸಭೆಯಲ್ಲಿ ಮಾತನಾಡಿದರು. ಕಿತ್ತೂರಿನ ವೀರ ಮಹಿಳೆ ಧೈರ್ಯ ಸಾಧನೆ ಸ್ವಾತಂತ್ರ್ಯಕ್ಕಾಗಿ ಬ್ರಿಟಿಷರ ವಿರುದ್ಧ ಕುದುರೆಯನ್ನೇರಿ ಖಡ್ಗ ಹಿಡಿದು ದೇಶದ ಭದ್ರತೆಗಾಗಿ ಯುದ್ಧ ಮಾಡಿ ದೇಶಕ್ಕೆ ಹಿರಿಮೆ ತಂದು ಕೊಟ್ಟ ಒಬ್ಬ ವೀರರಾಣಿ ಮಹಿಳೆಗೆ ದೇಶದ ಪ್ರತಿಯೊಬ್ಬ ಪ್ರಜೆಗಳು ಗೌರವಿಸಬೇಕು. ಎಂದು ಶಾಸಕರು.ಸಭೆಯಲ್ಲಿ ಮಾತನಾಡಿದರು. ಈ ಸಂದರ್ಭದಲ್ಲಿ ವೀರಶೈವ ಪಂಚಮಸಾಲಿ ಲಿಂಗಾಯತ ಸಮಾಜದ ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮವನ್ನು ನೆರವೇರಿಸಿದರು. ಹಾಗೂ ಸಮಾಜದ ಯುವ ಘಟಕದ ಯುವಕರಿಗೆ ಸನ್ಮಾನ ಮಾಡಲಾಯಿತು. ಹಾಗೂ ಸಮಾಜದ ವೀರಶೈವ ಪಂಚಮಸಾಲಿ ತಾಲೂಕ ಅಧ್ಯಕ್ಷತೆ ವಹಿಸಿದ ಆರ್.ಜೆ ಜಯಕುಮಾರ್ ಹಾಗೂ ತಾಲೂಕ ಅಧ್ಯಕ್ಷರು ಸೋಮನಗೌಡ. ಮಾಲಿ ಪಾಟೀಲ್. ಹಾಗೂ ಸಮಾಜದ ಯುವಕರು ಪ್ರಮುಖ ಮುಖಂಡರುಗಳು ಭಾಗವಹಿಸಿದ್ದರು ಎಂದು ವರದಿಯಾಗಿದೆ.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್. ಕೆ ನ್ಯೂಸ್ ಕನ್ನಡ ಚಾನಲ್: ತಿಪ್ಪೇಸ್ವಾಮಿ.ಹೊಂಬಾಳೆ.ಮೊಳಕಾಲ್ಮುರು**

## ಡಾ. ಅಂಬೇಡ್ಕರ್ ಅವರ ಭಾವ ಚಿತ್ರವಿರುವ ಧ್ವಜದ ಕಟ್ಟೆಯ ಪುನರ್ ನಿರ್ಮಾಣ ಮಾಡಿದರು

ಸಿಹಿ ಕಹಿ ಸುದ್ದಿ,

**ಕಬ್ಬಲಗೇರಿ** : ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಕಬ್ಬಲಗೇರಿ ಗ್ರಾಮದ ದಲಿತ ಕಾಲೋನಿಯ ಹತ್ತಿರ ಇತ್ತೀಚಿಗೆ ಪೊಲೀಸ್ ಇಲಾಖೆಯಿಂದ ಡಾ, ಅಂಬೇಡ್ಕರ್ ಭಾವ ಚಿತ್ರವಿರುವ ಧ್ವಜದ ಕಟ್ಟೆಯನ್ನು ದಲಿತರ ಪ್ರತಿರೋಧದ ಮಧ್ಯೆಯು ಅದನ್ನು ತೆರವು ಗೊಳಿಸಲಾಗಿತ್ತು. ಹಾಗೂ ಆ ಸಂದರ್ಭದಲ್ಲಿ ದಲಿತ ಯುವಕರ ಮೇಲೆ ಹಲ್ಲೆಯನ್ನು ನಡೆಸಲಾಗಿತ್ತು.
ಈ ವಿಷಯದ ಕುರಿತು ನಿನ್ನೆ ದಿನ ಕೆಲವು ಸಂಘಟನೆ ಮುಖಂಡರು ಗ್ರಾಮದಲ್ಲಿ ಉಂಟಾದ ವಾಲ್ಮೀಕಿ ಮತ್ತು ಮಾದಿಗ ಸಮುದಾಯದ ಮಧ್ಯದ ಬಿಗುವಿನ ವಾತಾವರಣವನ್ನು ತಿಳಿಗೊಳಿಸಿ ಸಾಮರಸ್ಯತೆಯಿಂದ ಇರಲು ತಿಳಿ ಹೇಳಿದ್ದರು. ಅದೇ ರೀತಿ ಇಂದು ಗ್ರಾಮಕ್ಕೆ ಭೇಟಿ ನೀಡಿದ ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ ರಾಜ್ಯ ಉಪಾಧ್ಯಕ್ಷರಾದ ವೈ.ಸಿ ಕಾಂಬಳೆ ವಕೀಲರ ನೇತೃತ್ವದಲ್ಲಿ ಎಐಬಿಎಸ್ಪಿ ರಾಜ್ಯ ಕಾರ್ಯಕಾರಣಿ ಸಮಿತಿ ಸದಸ್ಯರಾದ ಗುರುಶಾಂತಪ್ಪ ಮದಿನಕರ ಮತ್ತು ಮಾದಿಗ ಮಹಾಸಭಾ ಜಿಲ್ಲಾಧ್ಯಕ್ಷರಾದ ಕಾಂತಿಚಂದ್ರ ಜ್ಯೋತಿ ಹಾಗೂ ಸಿಂಧೂರ ಲಕ್ಷ್ಮಣ ಯುವಸೇನೆ



ತಾಲೂಕಾಧ್ಯಕ್ಷರಾದ ಗಿರೀಶ ತಳವಾರ ರವರು ಎರಡು ಸಮುದಾಯದ ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಪುನಃ ಅದೇ ಸ್ಥಳದಲ್ಲಿ ಸಂವಿಧಾನ ಶಿಲ್ಪಿ ಡಾ, ಬಾಬಾ ಸಾಹೇಬ್ ಅಂಬೇಡ್ಕರ ಅವರ ಭಾವ ಚಿತ್ರವಿರುವ ಧ್ವಜದ ಕಟ್ಟೆಯನ್ನು ಸಿಮೆಂಟ್ ನಿಂದ ಪುನರ್ ನಿರ್ಮಾಣ ಗೊಳಿಸಲಾಯಿತು.
ತದನಂತರ ಡಾ, ಅಂಬೇಡ್ಕರ ರವರ ಭಾವಚಿತ್ರ ಹಾಗೂ ಕಟೆ–್ಟಗೆ ಪೂಜೆ ಸಲ್ಲಿಸಿದರು. ಈ ಸಂದರ್ಭದಲ್ಲಿ ಬಾದಾಮಿಯ ಕ್ರೈಂ ಪಿಎಸ್ಐ ಶ್ರೀ ವಿಜಯಕುಮಾರ ರಾಠೋಡ ಮತ್ತು ಪೊಲೀಸ್ ಸಿಬ್ಬಂದಿ ಹಾಗೂ ಗ್ರಾಮದ ಬಾಲಪ್ಪ ಮಾದರ, ವೆಂಕಟೇಶ ಮಾದರ, ಬಸವರಾಜ ಮಾದರ ಮುಂತಾದ ನೂರಾರು ಜನ ಗ್ರಾಮಸ್ಥರು ಉಪಸ್ಥಿತರಿದ್ದರು.

## ಅಂಬೇಡ್ಕರ್, ಬಸವೇಶ್ವರ ಮತ್ತು ಮಹರ್ಷಿ ವೃತ್ತ ಸಂಬಂಧ ನಾನಾ ಸಮಾಜದ ಮುಖಂಡರು ಸಭೆಯಲ್ಲಿ ಭಾಗಿ

ಸಿಹಿ ಕಹಿ ಸುದ್ದಿ,

**ಮಾನ್ವಿ** : ಮಾನ್ವಿ ಪಟ್ಟಣದ ಮೂಲಕ ರಾಜ್ಯ ಹೆದ್ದಾರಿ ಹಾದು ಹೋಗಿದ್ದರಿಂದ ಕಾಮಗಾರಿ ಪ್ರಾರಂಭವಾಗಿದೆ. ಹೀಗಾಗಿ ಅಂಬೇಡ್ಕರ್, ಬಸವೇಶ್ವರ ಮತ್ತು ಮಹರ್ಷಿ ವಾಲ್ಮೀಕಿ ವೃತ್ತ ನಿರ್ಮಾಣ ಸಂಬಂಧ ಬಾಲಾಜಿ ಕಂಫರ್ಟ್ಸ್‌ನಲ್ಲಿ ನಾನಾ ಸಮಾಜದ ಮುಖಂಡರ ಸಭೆ ನಡೆಯಿತು. ಹೊಸಪೇಟೆ ಸೇರಿದಂತೆ ನಾನಾ ಜಿಲ್ಲೆಯಲ್ಲಿ ವೃತ್ತಕ್ಕೆ ಅವಕಾಶ ಕೊಟ್ಟು ರಸ್ತೆ ನಿರ್ಮಾಣ ಮಾಡಿರುವುದು ಉದಾಹರಣೆ ಇದೆ. ಅದೆ ರೀತಿಯಲ್ಲಿ ಮಾನ್ವಿ ಪಟ್ಟಣದಲ್ಲಿ ಅಂಬೇಡ್ಕರ್, ಮಹರ್ಷಿ ಮತ್ತು ಬಸವೇಶ್ವರ ವೃತ್ತವನ್ನು ನಿರ್ಮಾಣ ಮಾಡೋಕೆ ತಾಲೂಕಾಡಳಿತ ಹಾಗೂ



ಜಿಲ್ಲಾಡಳಿತ ಅವಕಾಶ ಮಾಡಿ ಕೊಡಬೇಕು ಎಂದು ಮುಖಂಡರು ಅಭಿಪ್ರಾಯ ವ್ಯಕ್ತಪಡಿಸಿದರು.
ಅದೆ ರೀತಿಯಲ್ಲಿ ಕಾನೂನು ಬದ್ಧವಾಗಿ ಹೆದ್ದಾರಿಯ ಅಧಿಕಾರಿಗಳು ಗುರುತಿಸಿದ ಮಾನದಂಡದಂತೆ ರಸ್ತೆ ಅಗಲೀಕರಣ ಮಾಡಬೇಕು. ರಾಜಕಾರಣಿಗಳ ಪಿತೂರಿಯಿಂದ ನಡೆದ ಕಡಿಮೆ ರಸ್ತೆ ಅಗಲೀಕರಣವನ್ನು ಬಿಟ್ಟು ಹೆದ್ದಾರಿ ಪ್ರಾಧಿಕಾರ ಸೂಚಿಸದಂತೆ ರಸ್ತೆ ನಿರ್ಮಾಣ ಮಾಡಬೇಕು ಎಂಬ ಚರ್ಚೆ ನಡೆಯಿತು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ. ಮಾನ್ವಿ**

## ವಿರೂಪಾಕ್ಷಯ್ಯ ಸ್ವಾಮಿ ಸಾಲಿಮಠ ಅಂತರಗಂಗೆ ಇವರಿಗೆ ಒಲಿದು ಬಂದ ಸಾಮ್ರಾಟ್ ಅಶೋಕ ದೇವ ನಾಮ ಪ್ರಿಯ ಪ್ರಶಸ್ತಿ



**ಮಸ್ಕಿ** : ಜಂಗಮ ಸಮಾಜದ ಯುವ ಮುಖಂಡರು ಮಸ್ಕಿತಾಲೂಕುಕರ್ನಾಟಕಕಾರ್ಯನಿರತಪತ್ರಕರ್ತರ ಧ್ವನಿ ಸಂಘದ ಅಧ್ಯಕ್ಷರಾದ ವಿರೂಪಾಕ್ಷಯ್ಯ ಸ್ವಾಮಿ ಸಾಲಿಮಠ ಅಂತರಗಂಗೆ ಇವರಿಗೆ 2024 25 ನೇ ಸಾಲಿನ ಮಸ್ಕಿ ಪಟ್ಟಣದಲ್ಲಿ ಪತ್ರಕರ್ತರ ಆರ್ಯನ್ ಏಳನೇ ರಾಜ್ಯ ಸಮ್ಮೇಳನದಲ್ಲಿ ಸಾಮ್ರಾಟ್ ಅಶೋಕ್ ದೇವ ನಾಮ ಪ್ರಿಯ ಪ್ರಶಸ್ತಿ ನೀಡಿ ಗೌರವಿಸಲಾಯಿತು ಇವರಿಗೆ ಡಾಕ್ಟರ್ ಜಲಾನುದ್ದೀನ್ ಅಕ್ಬರ್ ಇವರಿಂದ ಎರಡನೇ ರಾಜ್ಯ ಪ್ರಶಸ್ತಿಯಾಗಿದೆ 2000 ಇಸವಿಯಲ್ಲಿ ಜನ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗಿದ್ದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮಾಧ್ಯಮ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಗಿದ್ದು ಇದು ಮೂರನೇ ರಾಜ ಪ್ರಶಸ್ತಿಯಾಗಿ ಪ್ರಶಸ್ತಿ ನೀಡಲಾಗಿದ್ದು ಪತ್ರಿಕಾ ಮಿತ್ರರು ಸಂಪಾದಕರು
ಈ ಸಂದರ್ಭದಲ್ಲಿ ಶುಭ ಹಾರೈಸಿದ್ದಾರೆ ಹಾಗೂ ಬೆಂಗಳೂರಿನ ಚಲನಚಿತ್ರ ನಿರ್ದೇಶಕ ಹಿರಿಯ ಪತ್ರಕರ್ತ ರಮೇಶ್ ಸುರವೆ ಹಾಗೂ ಮಹೇಂದ್ರ ಕುರುಡಿ ಸಾಹಿತಿಗಳು ಬಂಗ್ಲೆ ಮಲ್ಲಿಕಾರ್ಜುನ ಸಂಸ್ಥಾಪಕ ರಾಜ್ಯಾಧ್ಯಕ್ಷರು ಶ್ರೀಮತಿ ಅಮೃತ ಪಾಟೀಲ್ ಸೇರಿದಂತೆ ಇನ್ನಿತರು ಮಹನೀಯರ ಸಮ್ಮುಖದಲ್ಲಿ ವಿರೂಪಾಕ್ಷಯ್ಯ ಸ್ವಾಮಿ ಸಾಲಿಮಟ್ಟವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

## 69ನೇ ಕನ್ನಡ ರಾಜ್ಯೋತ್ಸವದ ಆಚರಣೆ

ಕೆ.ಆರ್.ಪೇಟೆ ಹೊನ್ನೇನಹಳ್ಳಿ ಗ್ರಾಮ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಸ್ವಾಮಿ ರವರ ಅಧ್ಯಕ್ಷತೆಯಲ್ಲಿ 69ನೇ ಕನ್ನಡ ರಾಜ್ಯೋತ್ಸವವನ್ನು ಕನ್ನಡಾಂಬೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಲಾಯಿತು, ನವೆಂಬರ್ 1 ರಂದು ಕರ್ನಾಟಕ ರಾಜ್ಯೋತ್ಸವ ಅಥವಾ ಕನ್ನಡ ದಿನವೆಂದು ಆಚರಿಸಲಾಗುತ್ತದೆ. ಈ ದಿನವನ್ನು ಕರ್ನಾಟಕ ರಾಜ್ಯ ರಚನೆಯ ದಿನ ಅಥವಾ ಕರ್ನಾಟಕ ದಿನ ಎಂದೂ ಕರೆಯಲಾಗುತ್ತದೆ. 1956 ರಲ್ಲಿ ದಕ್ಷಿಣ ಭಾರತದ ಎಲ್ಲಾ ಕನ್ನಡ ಭಾಷೆ ಮಾತನಾಡುವ ಪ್ರದೇಶಗಳನ್ನು ವಿಲೀನಗೊಳಿಸಿ ಮೈಸೂರು ರಾಜ್ಯವನ್ನು ರಚಿಸಲಾಯಿತು.ಆದರೆ ಕರ್ನಾಟಕ ಹೆಸರು ಬಂದದ್ದು ಹೇಗೆ ಎಂದು ನೋಡುವುದಾದರೆ ಕರ್ನಾಟಕ ಪದದ ಮೂಲ ಸಂಸ್ಕೃತ ಭಾಷೆ. ಸಂಸ್ಕೃತದ ಕನ್ನಡ ಎಂಬ ಪದದಿಂದ ಕರ್ನಾಟಕ ಹುಟ್ಟಿದೆ. ಕನ್ನಡಿಗರ ನಾಡು, ಕನ್ನಾಡು, ಕನ್ನಡ ನಾಡು ಎಂಬುದು ಇದರ ಅರ್ಥ.ಆದರೆ ಕರ್ನಾಟಕ ಎಂಬ ಪದದ ಹುಟ್ಟು ಅಥವಾ ಅರ್ಥದ ಬಗ್ಗೆ ಹಲವು ಅಭಿಪ್ರಾಯಗಳಿವೆ. ಕರು + ನಾಡು = ಕರುನಾಡು ಎಂಬ ಪದವು ಕರ್ನಾಟಕವಾಯಿತು ಎನ್ನಲಾಗುತ್ತದೆ.



ಕರು ಎಂದರೆ ಕಪ್ಪು, ಇದರರ್ಥ ಕಪ್ಪು ಮಣ್ಣಿನ ನಾಡು ಎಂದು ಹೇಳಲಾಗುತ್ತದೆ. ಹಳೆಯ ಗ್ರಂಥಗಳು ಇದನ್ನು ಕರ್ನಾಟ ಎಂಬ ಪದದಿಂದ ಪಡೆಯಲಾಗಿದೆ ಎಂದು ಸೂಚಿಸುತ್ತವೆ. ಕೆಲವು ಮೂಲಗಳು ಕರ್ನಾಟಕವನ್ನು ಎತ್ತರದ ಭೂಮಿಗೆ ಅನುವಾದಿಸಿವೆ. ಕನ್ನಡಿಗರ ನಾಡನ್ನು ಮೈಸೂರು ರಾಜ್ಯದಿಂದ ಕರ್ನಾಟಕ ಎಂದು ಹೆಸರಿಡಬೇಕು ಎಂದು ಮೊದಲು 1972 ರ ಜುಲೈನಲ್ಲಿ ಈ ಬಗ್ಗೆ ಚರ್ಚೆ ಎದ್ದಿದ್ದು ಇದೆ ಸ್ನೇಹಿತರೇ. ದೀರ್ಘಾವಧಿಯ ಚರ್ಚೆಗಳ ನಂತರ ರಾಜ್ಯ ವಿಧಾನಸಭೆಯಲ್ಲೂ ಇದಕ್ಕೆ ಸರ್ವಾನುಮತದಿಂದ ಅನುಮತಿ ಸಿಕ್ಕಿತು. ಆಲೂರು ವೆಂಕಟರಾವ್ ರವರು 1905 ರಲ್ಲಿ ಕರ್ನಾಟಕ ಏಕೀಕರಣ ಚಟುವಳಿಯೊಂದಿಗೆ ರಾಜ್ಯವನ್ನು ಏಕೀಕರಿಸುವ ಕನಸು ಕಂಡ ಮೊದಲ ವ್ಯಕ್ತಿ. ಅವರಿಗೆ ಈ ಸುಸಂದರ್ಭದಲ್ಲಿ ಧನ್ಯವಾದಗಳನ್ನು ಹೇಳೋಣ ಎಂದು ಶಾಲಾ ಮುಖ್ಯ ಶಿಕ್ಷಕರಾದ ಶ್ರೀಧರ್ ಮಕ್ಕಳಿಗೆ ತಿಳಿಸಿದರು.
ಈ ಸಂದರ್ಭದಲ್ಲಿ ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಸ್ವಾಮಿ ಶಿಕ್ಷಕರಾದ ರಾಧಾ ಹಾಗು ಅಡುಗೆ ಸಿಬಂದಿಯಾದ ಸುಕನ್ಯಾ,ಸದಸ್ಯರು, ಪೋಷಕರು, ಶಾಲಾ ಮಕ್ಕಳು ಭಾಗವಹಿಸಿದ್ದರು.

**ವರದಿ, ಎಸ್ ರವಿ ಹೊನ್ನೇನಹಳ್ಳಿ**

## 3000 ಮೀಟರ್ ಓಟದಲ್ಲಿ ರಾಜ್ಯ ಮಟ್ಟಕ್ಕೆ ಆಯ್ಕೆ



**ಮುದ್ದೇಬಿಹಾಳ:**ತಾಲೂಕಿನ ಬಸರಕೋಡದ ಶ್ರೀ ಪವಾಡಬಸವೇಶ್ವರಪ್ರೌಢಶಾಲೆಯವಿದ್ಯಾರ್ಥಿಗಳಾದ ನಿರಜ ಪುಂಡಲೀಕ ಮಾಶೇಟ್ಟಿ 3000 ಮೀಟ–ರ್ ಓಟದ ಸ್ಪರ್ಧೆಯಲ್ಲಿ ಅಕ್ಟೋಬರ್ 26 ರಂದು ವಿಜಯಪುರದಲ್ಲಿ ನಡೆದ ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತಿಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ.
ಮತ್ತು ಸಿದ್ದಮ್ಮ ಕುಂಟೋಜಿ ಉದ್ದ ಜಿಗಿತದಲ್ಲಿ ಮೂರನೇ ಸ್ಥಾನ ಪಡೆದು ಶಾಲೆಯ ಕೀರ್ತಿಯನ್ನು ರಾಜ್ಯಮಟ್ಟದಲ್ಲಿಹೋಯ್ದಿದ್ದಕ್ಕೆಸಂಸ್ಥೆಯಅಧ್ಯಕ್ಷರಾದ ಕೆ ವೈ ಬಿರಾದಾರ,
ಮತ್ತು ಸಂಸ್ಥೆಯ ಸದಸ್ಯರು ಹಾಗೂ ಮುಖ್ಯ ಗುರುಗಳಾದ ವ್ಹಿ ಪಿ ಮೇಲ್ಮನಿ, ದೈಹಿಕ ಶಿಕ್ಷಕರು, ಶಾಲೆಯ ಸಿಬ್ಬಂದಿ ವರ್ಗದವರು ಹಾಗೂ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘ ಹಾಗೂ ಊರಿನ ಗಣ್ಯರು ಅಭಿನಂದನೆಗಳು ಸಲ್ಲಿಸಿದರು.

## ಜಿಲ್ಲಾಧಿಕಾರಿಗಳ ಆದೇಶದಂತೆ ಭವನವನ್ನು ವಶಪಡಿಸಿಕೊಳ್ಳಲಾಗಿದೆ: ಅಧ್ಯಕ್ಷೆ ಸಂಗಮ

**ಇಳಕಲ್** : ನಗರಸಭೆ ಹತ್ತಿರದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಭವನವನ್ನು ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ನಗರಸಭೆಯ ಪೌರಾಯುಕ್ತರು, ತಹಶೀಲ್ದಾರ, ಸಿ.ಪಿ.ಐ ಅವರ ಸಮ್ಮುಖದಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದು ನಗರಸಭೆ ಅಧ್ಯಕ್ಷೆ ಸುಧಾರಾಣಿ ಮುರುಗೇಶ ಸಂಗಮ ಅವರು ಸ್ಪಷ್ಟಪಡಿಸಿದರು.
ಸೋಮವಾರ ನಗರಸಭೆಯ ಅಧ್ಯಕ್ಷರ ಕೊಠಡಿಯಲ್ಲಿ ಕರೆಯಲಾದ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಾ ನಗರಸಭೆಯ ಜಾಗದಲ್ಲಿ ಸರ್ಕಾರದ ಅನುದಾನ ಪಡೆದು ನಿರ್ಮಿಸಿದ ಎಲ್ಲಾ ಭವನಗಳನ್ನು ನಗರಸಭೆಯವರು ವಶಪಡಿಸಿಕೊಳ್ಳುವುದಕ್ಕೆ ಜಿಲ್ಲಾಧಿಕಾರಿ ಅವರ ಸೂಚನೆಯಂತೆ ಸಿದ್ದರಾಮೇಶ್ವರ ಭವನ,ಡಾ.ಜಗಜೀವನರಾಮ್‌ಭವನವನ್ನು ವಶಪಡಿಸಿಕೊಂಡಂತೆ ಅಂಬೇಡ್ಕರ್ ಭವನವನ್ನು ವಶಪಡಿಸಿಕೊಂಡಿದ್ದಾರೆ ಅಲ್ಲಿ ಯಾವುದೇ ದಬ್ಬಾಳಿಕೆ ದೌರ್ಜನ್ಯ ನಡೆದಿಲ್ಲ ಪೌರಾಯುಕ್ತರನ್ನು ಮಾಜಿ ಅಧ್ಯಕ್ಷೆ ಶೋಭಾ ಆಮದಿಹಾಳ ಅವರೇ ನಿಂದಿಸಿದ್ದಾರೆ



ಉಳಿದ ಭವನಗಳನ್ನು ಹಂತಹಂತವಾಗಿ ವಶಪಡಿಸಿಕೊಳ್ಳಲಾಗುವು ಎಂದರು.
ನಗರಸಭೆ ಸದಸ್ಯ ಸುರೇಶ ಜಂಗ್ಲಿ ಮಾತನಾಡಿ ನಗರಸಭೆ ಅಂಬೇಡ್ಕರ್ ನಿವಾಸದಲ್ಲಿ ಪೌರಕಾರ್ಮಿಕರ ಮನೆಗಳನ್ನು ಕೆಡುವಲು ಹೋಗಿ ಅವರನ್ನು ಬೀದಿಗೆ ತಳ್ಳುವ ಕೆಲಸವನ್ನು,
ಅಂಬೇಡ್ಕರ್ ಜಯಂತಿ ನಡೆಯದಂತೆ ನೋಡಿಕೊಳ್ಳುವುದು, ಅಲ್ಲದೆ 96 ಜನ ಅಮಾಯಕರ ಮೇಲೆ ಸುಳ್ಳು ಪ್ರಕರಣ ದಾಖಲಿಸಿದ್ದು ಏಕೆ? ಎಂದು ಸಾರ್ವಜನಿಕ–ರಿಗೆ ತಿಳಿದಿದೆ ಎಂದು ಶೋಭಾ ಆಮದಿಹಾಳ ಅವರಿಗೆ ಪರೋಕ್ಷವಾಗಿ ತಿರುಗೇಟು ನೀಡಿದರು.
ನಗರಸಭೆ ಸದಸ್ಯ ಅಮೃತ ಬಿಜ್ಜಲ ಮಾತನಾಡಿ ಸರ್ಕಾರ ತಮ್ಮ ಜಾಗೆಯಲ್ಲಿನ ಭವನವನ್ನು ಕೇಳಿದರೆ ಅದು ದೌರ್ಜನ್ಯ, ದಬ್ಬಾಳಿಕೆ ಆಗುವುದಿಲ್ಲ, ತಮ್ಮ ಅಧಿಕಾರ ಅವಧಿಯಲ್ಲಿ ಮಾಜಿ ಶಾಸಕ ದೊಡ್ಡನಗೌಡ ಜಿ.ಪಾಟೀಲ ಅವರ ಕುಮ್ಮಕ್ಕಿನಿಂದ ಎಂಟು ಜನ ಕಾಂಗ್ರೆಸ್ ಸದಸ್ಯರ ಮೇಲೆ ಜಾತಿನಿಂದನೆ ಇನ್ನಿತರ ಸುಳ್ಳು ಪ್ರಕರಣವನ್ನು ದಾಖಲಿಸಿದ್ದು ದೌರ್ಜನ್ಯ, ದಬ್ಬಾಳಿಕೆ ಅಲ್ಲವೇ ಎಂದರು.
ನಗರಸಭೆ ಸದಸ್ಯೆ ರೇಷ್ಮಾ ಮಾರನಬಸರಿ ಮಾತನಾಡಿ ಮಾಜಿ ಅಧ್ಯಕ್ಷೆ ಶೋಭಾ ಅಮದಿಹಾಳ ಅವರು ಅಂಬೇಡ್ಕರ್ ಭವನವನ್ನು ತಮ್ಮ ಟ್ರಸ್ಟ್ ಹೆಸ–ರಿನಲ್ಲಿ ಮಾಡಿಸಿಕೊಳ್ಳಲು ನಗರಸಭೆಯ ಉತಾರವನ್ನು ತಿದ್ದುಪಡಿ ಮಾಡಿಸಲು ಸ್ವಜಾತಿಯ ಇಬ್ಬರು ನೌಕರರನ್ನು ಬಳಸಿಕೊಂಡಿದ್ದು ಜಿಲ್ಲಾಧಿಕಾರಿಗಳ ಗಮನಕ್ಕೆಬಂದನಂತರ ಆ ಇಬ್ಬರು ನೌಕರರು ಅಮಾನತ್ತುಗೊಂಡಿದ್ದರು ಎನ್ನುತ್ತಾ ಮಾಜಿ ಅಧ್ಯಕ್ಷೆ ಶೋಭಾ ಅವರೇ ತಮ್ಮ ಮಕ್ಕಳ ಹೆಸರಿನಲ್ಲಿ ಆಶ್ರಯ ಪ್ಲಾಟುಗಳನ್ನು ಮಾಡಿಸಿಕೊಳ್ಳುವ ಮೂಲಕ ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ ಎಂದು ಆರೋಪಿಸಿದರು.
ನಗರಸಭೆ ಉಪಾಧ್ಯಕ್ಷೆ ಕಾಳಮ್ಮ ಜಕ್ಕಾ ಮಹಿಳಾ, ಸದಸ್ಯರಾದ ಶರಣಮ್ಮ ತಿಮ್ಮಾಪೂರ, ಆಫ್ರೀನ್ ಸೋನಾರ, ನಜ್ಮಾಬೇಗಂ ಬನ್ನಿಗೋಳ, ಶಾರದಾ ಪತ್ತಾರ, ಮೌಲೇಶ ಬಂಡಿವಡ್ಡರ, ನಾಮ ನಿರ್ದೇಶನ ಸದಸ್ಯರಾದ ಮಲ್ಲು ಮಡಿವಾಳರ, ಯಲ್ಲಪ್ಪ ರಾಜಾಪೂರ. ಯಲ್ಲಪ್ಪ ಪೂಜಾರಿ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

# ಮನೆಯಲ್ಲಿ ಆಕಾಶ ಬುಟ್ಟಿ ತಯಾರಿಸಿದ ಮಕ್ಕಳು



**ಬನಹಟ್ಟಿ :** ಸಮೀಪದ ಜಗದಾಳ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳು ದೀಪವಾಳಿ ಹಬ್ಬದ ಪ್ರಯುಕ್ತ ಆಕಾಶ ಬುಟ್ಟಿಗಳನ್ನು ತಮ್ಮ ಮನೆಯಲ್ಲಿ ತಯಾರಿಸಿಕೊಂಡು ಶಾಲೆಯಲ್ಲಿ ಪ್ರದರ್ಶನ ಮಾಡಿದರು. ತಾವು ತಯಾರಿಸಿದ ಆಕಾಶ ಬುಟ್ಟಿಯನ್ನು ತಮ್ಮ ಮನೆಯಲ್ಲಿ ಕಟ್ಟಿ ಸಂಭ್ರಮ ಪಟ್ಟರು.

ಶಾಲೆಯ ಶಿಕ್ಷಕಿ ಮಂಜುಳಾ ಹೂಗಾರ ಮತ್ತು ಇನ್ನಿತರ ಸಿಬ್ಬಂದಿಯ ಮಾರ್ಗದರ್ಶನಲ್ಲಿ ಇಪ್ಪತ್ತಕ್ಕಿಂತ ಹೆಚ್ಚು ಮಕ್ಕಳು ಮನೆಯಲ್ಲಿ ಆಕಾಶ ಬುಟ್ಟಿಗಳನ್ನು ತಯಾರಿಸಿಕೊಂಡು ಶಾಲೆಯಲ್ಲಿ ಪ್ರದರ್ಶಿಸಿದರು.

ಆಕರ್ಷಣೀಯವಾಗಿ ತಯಾರಿಸಿಕೊಂಡು ಬಂದವರಿಗೆ ಬಹುಮಾನ ನೀಡುವುದಾಗಿ ಘೋಷಣೆ ಮಾಡಿದ್ದರಿಂದ ವಿದ್ಯಾರ್ಥಿಗಳು ಉತ್ತಮ ರೀತಿಯಲ್ಲಿ ಮತ್ತು ಗಮನ ಸೆಳೆಯುವ ನಿಟ್ಟಿನಲ್ಲಿ ಆಕಾಶ ಬುಟ್ಟಿಗಳನ್ನು ತಯಾರಿಸಿಕೊಂಡು ಬಂದಿದ್ದರು. ರಾಜ್ಯೋತ್ಸವದ ದಿನದಂದು ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ಮಾಡಲಾಗುವುದು ಎಂದು ಶಿಕ್ಷಕಿ ಮಂಜುಳಾ ಹೂಗಾರ ತಿಳಿಸಿದರು.

ವೈವಿಧ್ಯಮಯವಾದ ಆಕಾಶ ಬುಟ್ಟಿಗಳು ಎಲ್ಲರ ಗಮನ ಸೆಳೆದವು. ಶಾಲೆಯ ವಿದ್ಯಾರ್ಥಿ ಸಿದ್ಧಾರ್ಥ ಮೇಟಿ ಚಹಾ ಕುಡಿಯುವ ಕಾಗದದ ಕಪ್ಪುಗಳಿಂದ ತಯಾರಿಸಿಕೊಂಡು ಬಂದ ಆಕಾಶ ಬುಟ್ಟಿ ವಿಶೇಷ ಗಮನ ಸೆಳೆದು ಸದರಿ ವಿದ್ಯಾರ್ಥಿಗೆ ಪ್ರಥಮ ಬಹುಮಾನ ನೀಡಲಾಯಿತು. ಸೌಮ್ಯಾ ಸೊನೊನೆ ದ್ವಿತೀಯ ಮತ್ತು ಪಲ್ಲವಿ ಜಾಧವ ತೃತೀಯ ಸ್ಥಾನ ಪಡೆದುಕೊಂಡರು.

ಗ್ರಾಮೀಣ ಭಾಗದಲ್ಲಿ ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು ಪ್ರತಿಭಾವಂತರಾಗಿದ್ದು, ಅವರಿಗೆ ಸೂಕ್ತ ಪ್ರೋತ್ಸಾಹ ನೀಡಿದರೆ ತಮ್ಮ ಪ್ರತಿಭೆ ಪ್ರದರ್ಶಿಸಬಲ್ಲರು ಎಂದು ಮುಖ್ಯ ಶಿಕ್ಷಕ ಆನಂದ ಶಿಂಥೆ ನುಡಿದರು.

# ಪ್ರತಿಭೆ ಅನಾವರಣಕ್ಕೆ ಸೂಕ್ತ ವೇದಿಕೆ ಪ್ರತಿಭಾ ಕಾರಂಜಿ: ಶಾಸಕ ಸವದಿ




**ರಬಕವಿ-ಬನಹಟ್ಟಿ :** ಮಕ್ಕಳಲ್ಲಿ ಅಡಗಿರುವ ಸೂಪ್ತ ಪ್ರತಿಭೆಯನ್ನು ಗುರುತಿಸಿ, ಅದಕ್ಕೆ ವೇದಿಕೆ ನೀಡಲು ಸರಕಾರ ಪ್ರತಿಭಾ ಕಾರಂಜಿಯಂತಹ ಕಾರ್ಯಕ್ರಮಗಳನ್ನು ಆಯೋಜಿಸಿದ್ದು ಇದರ ಸದುಪಯೋಗ ಪಡೆದುಕೊಂಡು ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಅನಾವರಣ ಗೊಳಿಸಬೇಕೆಂದು ಶಾಸಕ ಸಿದ್ದು ಸವದಿ ಹೇಳಿದರು.

ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳ, ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ ಹಾಗೂ ಶ್ರೀ ಪ್ರಭುಲಿಂಗೇಶ್ವರ ಇಂಟರನ್ಯಾಷನಲ್ ಸ್ಕೂಲ್ ಚಿಮ್ಮಡ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ 2024-25 ನೇ ಸಾಲಿನ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮದ ಉದ್ಘಾಟನೆನೆರವೇರಿಸಿಮಾತನಾಡಿದಅವರು ದೇಶದ ಬಹುತೇಕ ದಿಗ್ಗಜ ಕಲಾವಿದರು, ಸಂಗೀತಗಾರರ ಪಾದಾರ್ಪಣೆಗೆ ಮೊದಲ ವೇದಿಕೆಯೇ ಪ್ರತಿಭಾ ಕಾರಂಜಿಯಂತಹ ಕಾರ್ಯಕ್ರಮಗಳು. ಇಂತಹ ದೇಶ ಕಟ್ಟುವಲ್ಲಿ ಸಹಕಾರಿಯಾಗಬಲ್ಲ ಕಾರ್ಯಕ್ರಮಗಳಿಗೆ ವೇದಿಕೆಯಾಗಲು ಪ್ರತಿ ವರ್ಷವೂ ನಮ್ಮ ಸಂಸ್ಥೆ ಸಿದ್ಧವಿದೆ ಎಂದರು.

ಕ್ಷೇತ್ರ ಶಿಕ್ಷಣಾಧಿಕಾರಿ ಅಶೋಕ ಬಸಣ್ಣವರ ಪ್ರಾಸ್ತಾವಿಕವಾಗಿ ಮಾತನಾಡಿ, ಶಿಕ್ಷಣದ ಮುಖ್ಯ ಭಾಗ ಈ ಪ್ರತಿಭಾ ಕಾರಂಜಿಯಲ್ಲಿ ಅಡಗಿದ್ದು ಸೋಲು ಗೆಲುವುಗಳನ್ನು ಸಮಾನವಾಗಿ ಸ್ವೀಕರಿಸುವುದನ್ನೂ ಈ ವೇದಿಕೆ ಕಲಿಸಿ ಕೊಡುತ್ತದೆ. ವಿವಿಧತೆಯಲ್ಲಿ ಏಕತೆಯಂತೆ ಭಗವದ್ಗೀತೆ, ಕುರಾನ್ ಪಠಣ, ಧಾರ್ಮಿಕ ಗೀತೆಗಳು, ಜನಪದ ಗೀತೆಗಳು, ಭರತನಾಟ್ಯ ಸೇರಿದಂತೆ ಇಪ್ಪತ್ತಕ್ಕೂ ಅಧಿಕ ಕಾರ್ಯಕ್ರಮಗಳು ಪ್ರತಿಭಾ ಕಾರಂಜಿಯಲ್ಲಿ ನಡೆಯಲಿದ್ದು ಅಖಂಡ ಜಮಖಂಡಿ ತಾಲೂಕಿನ26ಕ್ಲಷ್ಟರ್‌ನವಿದ್ಯಾರ್ಥಿ/ನಿಯರು ಇದರಲ್ಲಿ ಭಾಗವಹಿಸಲಿದ್ದಾರೆಂದರು.

ಮುಖ್ಯ ಅಥಿತಿಗಳಾಗಿ ಶ್ರೀ ಪ್ರಭುಲಿಂಗೇಶ್ವರ ಇಂಟರನ್ಯಾಷನಲ್ ಸ್ಕೂಲ್ನ ಸಂಸ್ಥಾಪಕ ಕಾರ್ಯದರ್ಶಿ ವಿದ್ಯಾಧರ ಸವದಿ, ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಮಾಲಾ ಅಶೋಕ ಮೋಟಗಿ, ಉಪಾಧ್ಯಕ್ಷೆ ಶ್ರೀಮತಿ ಪ್ರೇಮಾ ಪ್ರಭು ಗೋವಿಂದಗೋಳ, ಕ್ಷೇತ್ರ ಸಮನ್ವಯಾಧಿಕಾರಿ, ಕಾಡೇಶ ಕೋಲೂರ, ಬಾಲಚಂದ್ರ ನಂದೆಪ್ಪನವರ, ಸಂಸ್ಥೆಯ ಪ್ರಾಚಾರ್ಯ ಪದ್ಮರಾಜ ಸಣಕಿ, ರಾಹುಲ್ ಉತ್ತೂರ,ಬಿ.ಎಸ್.ಕಡಕೋಳ,ಬಾಬಾಗೌಡ ಪಾಟೀಲ, ಅರ್ಜುನ ಕಾಖಂಡಕಿ, ಅಪ್ಪಾಸಾಹೇಬ ಹಟ್ಟೆನ್ನವರ, ಎ. ಬಿ. ಮಾಂಗ್, ಸ್ಥಳಿಯ ಸರಕಾರಿ ಪ್ರೌಢಶಾಲೆಯ ಮುಖ್ಯೋಪಾಧ್ಯಾಯ ಎಂ.ಎಸ್. ಜಿಟ್ಟಿ ಸೇರಿದಂತೆ ಹಲವಾರು ಜನ ಪ್ರಮುಖರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಬಿ.ಆರ್.ಸಿ. ರಮೇಶ ಅವಟಿ ಸ್ವಾಗತಿಸಿದರು. ಶ್ರೀಮತಿ ಎಸ್. ಎ. ರಾಸೂರ ನಿರೂಪಿಸಿದರು. ಕ್ಷೇತ್ರ ಸಮನ್ವಯಾಧಿಕಾರಿ ಬಿ. ಎಂ. ಹಳಮನಿ ವಂದಿಸಿದರು.

# ರಾಜ್ಯಮಟ್ಟದ ಕುಸ್ತಿಯಲ್ಲಿ ಕಂಚಿನ ಪದಕ



**ಚಿಮ್ಮಡ :** ಗ್ರಾಮದ ಸರಕಾರಿ ಪ್ರೌಢ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿ ಕುಮಾರಿ ಪ್ರೇಮಾ ಮಹಾದೇವ ಕುಂಬಾರ ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿ ತೃತೀಯ ಸ್ಥಾನದಲ್ಲಿ ಕಂಚಿನ ಪದಕ ಪಡೆಯುವ ಮೂಲಕ ಅಪೂರ್ವ ಸಾಧನೆ ಮಾಡಿದ್ದಾಳೆ.

ರಾಮನಗರ ಜಿಲ್ಲೆಯ ಕನಕಪುರದಲ್ಲಿ ಇತ್ತೀಚೆಗೆ ಜರುಗಿದ ರಾಜ್ಯಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿ ಕಂಚಿನ ಪದಕ ಪಡೆದು ವಿಶಿಷ್ಟ ಸಾಧನೆ ಮಾಡಿದ ವಿದ್ಯಾರ್ಥಿನಿಯನ್ನು ಶಾಲಾ ಉಸ್ತುವಾರಿ ಸಮೀತಿಯ ಪದಾಧಿಕಾರಿಗಳು, ಶಾಲೆಯ ಮುಖ್ಯೋಪಾಧ್ಯಾಯಿನಿ ಎಂ. ಎಸ್. ಜಿಟ್ಟಿ ಹಾಗೂ ಗ್ರಾಮ ಪಂಚಾಯತ್ ಅಧ್ಯಕ್ಷೆ ಶ್ರೀಮತಿ ಮಾಲಾ ಅಶೋಕ ಮೋಟಗಿ ಹೃದಯಾರೆ ಅಭಿನಂದಿಸಿದ್ದಾರೆ.

# ಭ್ರಷ್ಟಾಚಾರ ದೇಶದ ಅಭಿವೃದ್ಧಿಗೆ ಮಾರಕ, ರಾಮರಾವ್ ಬಿರಾದಾರ






**ಬಾಗಲಕೋಟೆ :** ಭ್ರಷ್ಟಾಚಾರವು ನಮ್ಮ ದೇಶದ ಸತತ ಅಭಿವೃದ್ಧಿಗೆ ದೊಡ್ಡ ಅಡೆತಡೆಯಾಗಿದ್ದು ಅದರ ಪರಿಣಾಮಗಳು ಎಲ್ಲಾ ಕ್ಷೇತ್ರಗಳ ಮೇಲು ಉಂಟಾಗುತ್ತದೆ ಎಂದು ಬಾಗಲಕೋಟೆಯ ನೆಹರು ಯುವ ಕೇಂದ್ರ ಸಂಯೋಜಕರಾದ ರಾಮರಾವ್ ಬಿರಾದಾರ ಹೇಳಿದರು.

ಬುಧವಾರ ನಗರದ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ನೆಹರು ಯುವ ಕೇಂದ್ರ ಬಾಗಲಕೋಟೆ, ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ ಭಾರತ ಸರ್ಕಾರ ಹಾಗೂ ಬಸವೇಶ್ವರ ವಾಣಿಜ್ಯ ಮಹಾವಿದ್ಯಾಲಯದ ಸಂಯೋಗದಲ್ಲಿ ಆಯೋಜಿಸಿದ್ದ ವಿಜಿಲೆನ್ಸ್ ಜಾಗೃತಿ ಸಪ್ತಾಹ 2024 ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ವಿವಿಧ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಭ್ರಷ್ಟಾಚಾರವು ಸಾಮಾನ್ಯವಾಗಿದೆ. ಹಣಕಾಸು, ಅಧಿಕಾರದ ದುರುಪಯೋಗ, ಲಂಚ ಸ್ವೀಕಾರ ಸೇರಿದಂತೆ ಮುಂತಾದ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿವೆ. ಅದನ್ನು ತಡೆಗಟ್ಟಲು ನಾವೆಲ್ಲರೂ ಭ್ರಷ್ಟಾಚಾರದ ವಿರುದ್ಧ ಹೋರಾಡಬೇಕು. ಇದನ್ನು ತಡೆಗಟ್ಟಲು ನಿರಂತರ ಪ್ರಯತ್ನ ಮಾಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಜಗನ್ನಾಥ ಚವ್ಹಾಣ ಮಾತನಾಡಿ ಭ್ರಷ್ಟಾಚಾರ ವ್ಯವಸ್ಥೆಯು ಸಾರ್ವಜನಿಕರ ನ್ಯಾಯದ ಹಕ್ಕನ್ನು ವಂಚಿಸುತ್ತಿದೆ ಹಾಗೂ ಆರ್ಥಿಕ ಸಮಾನತೆ ಮತ್ತು ಸಾಮಾಜಿಕ ನ್ಯಾಯದ ಮೂಲ ಆಶಯವನ್ನು ಹಾಳು ಮಾಡುತ್ತಿದೆ. ದೇಶದ ಸರ್ವತೋಮುಖ ಅಭಿವೃದ್ಧಿಗೆ ಭ್ರಷ್ಟಾಚಾರ ರಹಿತ ವ್ಯವಸ್ಥೆಯ ಅವಶ್ಯಕತೆ ಇದೆ. ಇದಕ್ಕಾಗಿ ಪ್ರತಿಯೊಬ್ಬ ನಾಗರಿಕರು ಭ್ರಷ್ಟಾಚಾರ ವಿರುದ್ಧ ಹೋರಾಡಬೇಕು ಎಂದು ತಿಳಿಸಿದರು.

ಎನ್.ಎಸ್.ಎಸ್. ಘಟಕದ ಅಧಿಕಾರಿಗಳಾದ ಡಾ. ಎಂ.ಎಂ. ಹುದ್ದಾರ ಅವರು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ನಯನಾ ಕುದುರಿ ನಿರೂಪಿಸಿದರು. ಸುಹಾಸ ಗೌಡರ ವಂದಿಸಿದರು. ಈ ಸಂದರ್ಭದಲ್ಲಿ ಎನ್‌ಎಸ್‌ಎಸ್ ಘಟಕದ ಅಧಿಕಾರಿಗಳಾದ ಪಿ.ಎಸ್. ಮಟ್ಟದ ಸೇರಿದಂತೆ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಹಾಗೂ ನೆಹರು ಯುವ ಕೇಂದ್ರದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

**ಪ್ರತಿಜ್ಞಾ ವಿಧಿ ಭೋಧನೆ**

ಭ್ರಷ್ಟಾಚಾರ ವ್ಯವಸ್ಥೆಯನ್ನು ಸಂಪೂರ್ಣವಾಗಿ ಖಂಡಿಸುತ್ತೇವೆ. ನಾವು ಯಾರು ಲಂಚ ಕೊಡುವುದಿಲ್ಲ ಮತ್ತು ಯಾರಿಂದಲೂ ಲಂಚವನ್ನು ಪಡೆದುಕೊಳ್ಳುವುದಿಲ್ಲ ಎಂದು ಪಲ್ಲವಿ ಮೇದಾರ ಪ್ರತಿಜ್ಞಾವಿಧಿ ಬೋಧಿಸಿದರು.

# ಭಕ್ತರ ಪರಿಶ್ರಮಕ್ಕೆ ದೊರೆತ ಕನ್ನಡ ಪ್ರಶಸ್ತಿ: ಅನ್ನದಾನೇಶ್ವರ ಶ್ರೀ

**ರಬಕವಿ-ಬನಹಟ್ಟಿ :** ರಾಜ್ಯ ಸರ್ಕಾರದ ಕನಾ9ಟಕ ಸುವರ್ಣ ಮಹೋತ್ಸವ ಪ್ರಶಸ್ತಿ ಪುರಸ್ಕೃತರಲ್ಲಿ ಸಮಾಜಸೇವೆ ವಿಭಾಗದಿಂದ ರಬಕವಿ-ಬನಹಟ್ಟಿ ತಾಲೂಕಿನ ಬಂಡಿಗಣಿಯ ಬಸವಗೋಪಾಲ ನೀಲಮಾಣಿಕ ಮಠದ ದಾಸೋಹ ಚಕ್ರವರ್ತಿ ಶ್ರೀ ಅನ್ನದಾನೇಶ್ವರ ಶ್ರೀಗಳಿಗೆ ದೊರೆತಿದೆ.

ಗುರುವಾರ ಬಂಡಿಗಣಿಯ ಶ್ರೀಮಠದಲ್ಲಿ ಭಕ್ತರ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಸತತ ಐದು ದಶಕಗಳಿಂದ ನಿರಂತರ ಅನ್ನದಾಸೋಹದ ಮೂಲಕ ಮಠವು ಹೆಸರುವಾಸಿಯಾಗಿದೆ. ಇದಕ್ಕೆ ಸಾವಿರಾರು ಭಕ್ತರ ತನು-ಮನ-ಧನದ ಸಹಾಯದಿಂದ ಇಂದಿಗೂ ಬಸವಗೋಪಾಲ ನೀಲಮಾಣಿಕ ಮಠದಿಂದ ಜ್ಞಾನದೊಂದಿಗೆ ದಾಸೋಹವೂ ನಡೆಯುತ್ತಿದೆ ಎಂದರು.

ರಾಜ್ಯೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸುವರ್ಣ ಮಹೋತ್ಸವ ಪ್ರಶಸ್ತಿ ದೊರೆಯುವಲ್ಲಿ ಮಠದ ಪ್ರಾಮಾಣಿಕ ಭಕ್ತರ ಪರಿಶ್ರಮ ಹಾಗು ನಿರಂತರ ಸೇವೆ ಅತ್ಯಮೂಲ್ಯವಾಗಿದೆ ಎಂದರು.

ದಾನದಲ್ಲಿ ಅನ್ನದಾನ ಶ್ರೇಷ್ಠವಾಗಿದೆ. ಮಠಕ್ಕೆ ಆಗಮಿಸುವ ಭಕ್ತರಿಗೆ ನಿರಂತರ ದಾಸೋಹದ ಮೂಲಕ ಉತ್ತರ ಕರ್ನಾಟಕದ ಬಹುತೇಕ ಜಾತ್ರೆ ಹಾಗು ರಥೋತ್ಸವ ಸಂದರ್ಭ ಆಗಮಿಸುವ ಲಕ್ಷಾಂತರ ಭಕ್ತರಿಗೆ ನಿರಂತರ ದಾಸೋಹದ ಮೂಲಕ ಮಠವು ತನ್ನದೇಯಾದ ನೆಮ್ಮದಿ ಕಂಡಿದೆ ಎಂದರು.

ನೆರೆಯ ಗುಡ್ಡಾಪೂರ, ಶ್ರೀಶೈಲದಲ್ಲಿ ಜಾತ್ರೆ ಸಂದರ್ಭ ತೆರಳುವ ಭಕ್ತರಿಗಾಗಿ ಶ್ರೀಮಠದ ನೂರಾರು ಭಕ್ತರು ಸ್ವಯಂ ಪ್ರೇರಿತವಾಗಿ ತೆರಳಿ ಅನ್ನಪ್ರಸಾದ ವ್ಯವಸ್ಥೆ ಕಲ್ಪಿಸುತ್ತಿರುವದು ನಿಜಕ್ಕೂ ಮಾದರಿ ಎಂದರು.

ಮಠದ ಏಳ್ಗೆಗೆ ಭಕ್ತರೇ ಕಾರಣ: ಸಾಮೂಹಿಕ ವಿವಾಹ, ನಿರಂತರ ಅನ್ನದಾಸೋಹ, ಸತ್ಸಂಗ, ಜ್ಞಾನಾರ್ಜನೆಗೆ ಭಕ್ತರ ಕೊಡುಗೆ ಬಹಳವಿದೆ. ನಿರಂತರ ಸೇವಾನುಭೂತಿ ಹೊತ್ತು ಮಠಕ್ಕೆ ಆಗಮಿಸುವ ಭಕ್ತರಿಗೆ ಪ್ರಶಸ್ತಿ ಲಭಿಸಿದ್ದಕ್ಕೆ ಸಂತಸ ತರುವಲ್ಲಿ ಕಾರಣವಾಗಿದೆ ಎಂದರು.

ಇದೇ ಸಂದರ್ಭ ಹಿರಿಯ ನ್ಯಾಯವಾದಿ ಹರ್ಷವರ್ಧನ ಪಟವರ್ಧನ, ಬಿಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಭೀಮಸಿ ಮಗದುಮ್, ಪರಮಾನಂದ ಮಗದುಮ್, ಚಂದ್ರು ಸಣ್ಣಕ್ಕಿ, ಶಿವಪ್ಪ ಬಾಗಲಕೋಟ, ಚನ್ನಪ್ಪ ನಿಂಬರಗಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಪ್ರತಿ ಸೋಮವಾರ ಮಾಂಸಾಹಾರ ನಿಷೇಧಕ್ಕೆ ಸಾಮೂಹಿಕ ಬೆಂಬಲ



**ರಬಕವಿ-ಬನಹಟ್ಟಿ :** ಬನಹಟ್ಟಿಯಲ್ಲಿ ಈಗಾಗಲೇ ಪ್ರತಿ ಸೋಮವಾರದಂದು ಬನಹಟ್ಟಿ ನಗರದ ಆರಾಧ್ಯದೈವ ಶ್ರೀ ಕಾಡಸಿದ್ಧೇಶ್ವರ ಹಾಗು ರಬಕವಿಯ ನಗರದ ಆರಾಧ್ಯದೈವ ಶ್ರೀ ಮಲ್ಲಿಕಾರ್ಜುನ ದೇವರ ಶುಭವಾರವಾಗಿರುವ ಕಾರಣ ಅವಳಿ ನಗರಾದ್ಯಂತ ಮಾಂಸಾಹಾರ ಅಂಗಡಿಗಳನ್ನು ಬಂದ್ ಮಾಡುವಂತೆ ವಿನಂತಿಸದರನ್ವಯ ಕಳೆದ ಸೋಮವಾರದಿಂದ ಉತ್ತಮ ಪ್ರತಿಕ್ರಿಯೆಯೊಂದಿಗೆ ಬಹುತೇಕ ವ್ಯಾಪಾರಸ್ಥರು ಸ್ವಯಂಪ್ರೇರಿತ ಬಂದ್ ಮಾಡುವ ಮೂಲಕ ಸಂಪ್ರದಾಯ ಮೆರೆಯುವಲ್ಲಿ ಕಾರಣರಾಗಿದ್ದಾರೆ.

ಈ ಕುರಿತು ಗುರುವಾರ ಬನಹಟ್ಟಿಯ ಮಂಗಳವಾರ ಪೇಟೆ ದೈವ ಮಂಡಳಿ ಕಚೇರಿಯಲ್ಲಿ ಬನಹಟ್ಟಿಯ ವಿವಿಧ ನಾಗರಿಕ ಸಂಘಟನೆಗಳ ಮುಖಂಡರು ಭಾಗಿಯಾಗಿ ಇನ್ನುಳಿದ ಪಟ್ಟಣದ ಹೊರವಲಯದಲ್ಲಿರುವ ದಾಭಾ ಹಾಗು ಅಂಗಡಿಕಾರರಿಗೂ ಮನವಿ ಮೂಲಕ ಬಂದ್‌ಗೆ ತಿಳಿಸಲಾಗುವದೆಂದು ಸ್ಪಷ್ಟಪಡಿಸಿದರು.

ಈ ಸಂದರ್ಭ ಮಾಂಸಾಹಾರ ಮಾರಾಟಗಾರರು ಹಾಗು ಅಂಗಡಿಕಾರರ ಮುಖಂಡರು ಸಭೆಯಲ್ಲಿ ಭಾಗಿಯಾಗಿ ನಗರದ ಹಾಗು ದೈವದ ಹಿತದೃಷ್ಟಿಗೆ ಬದ್ಧರಾಗಿದ್ದು, ಎಲ್ಲರ ಸಹಮತದೊಂದಿಗೆ ಪ್ರತಿ ಸೋಮವಾರ ಸಂಪೂರ್ಣ ಮಾಂಸಾಹಾರವನ್ನು ನಿಷೇಧಿಸುವಲ್ಲಿ ಒಪ್ಪಿಗೆ ಸೂಚಿಸಿದರು.

ಇದೇ ಸಂದರ್ಭ ಶ್ರೀಶೈಲಪ್ಪ ದಭಾಡಿ, ಮಲ್ಲಿಕಾರ್ಜುನ ತುಂಗಳ, ಸಿದ್ಧನಗೌಡ ಪಾಟೀಲ, ಶಂಕರ ಸೊರಗಾಂವಿ, ದಾನಪ್ಪ ಹುಲಜತ್ತಿ, ಬುಡಾನ ಜಮಾದಾರ, ಶಶಿಕಾಂತ ಹುನ್ನೂರ, ಅಶೋಕ ಬಾಣಕಾರ, ಫಿರೋಜ ಜಕಾತಿ, ಅಜೀಜ ಶೇಖ್, ಮುನ್ನಾ ಮುಲ್ಲಾ, ಮುಸ್ತಾಕ ಹಲಗಲಿ ಸೇರಿದಂತೆ ಅನೇಕರಿದ್ದರು.

# ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿಗೆ ರಾಜ್ಯ ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಿ: ಪ್ರಭು ತಳಗೇರಿ



ಬಿಜೆಪಿಜಿಲ್ಲಾಯುವಮೋರ್ಚಾಕಾರ್ಯದರ್ಶಿಯಾದ ಪ್ರಭು ತಳಗೇರಿ ಮಾತನಾಡಿ ಈಗಾಗಲೇ ಪರಿಶಿಷ್ಟರ ಒಳಮೀಸಲಾತಿಗೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯವು ತೀರ್ಪು ನೀಡಿದ್ದು, ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಕೊಟ್ಟ ಭರವಸೆಯಂತೆ ಕೂಡಲೇ ಒಳ ಮೀಸಲಾತಿಯನ್ನು ಜಾರಿಗೆ ತರಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗ ಒಳ ಮೀಸಲಾತಿಯನ್ನು ಒದಗಿಸಿಕೊಡುವ ಅಧಿಕಾರವನ್ನು ಸರ್ವೋಚ್ಚ ನ್ಯಾಯಾಲಯವು ಆಯಾ ರಾಜ್ಯ ಸರ್ಕಾರಗಳಿಗ ಕೊಟ್ಟಿದೆ ಎಂದರು.

ರಾಜ್ಯದಲ್ಲಿಕಳೆದ20ವರ್ಷಗಳಿಂದಒಳಮೀಸಲಾತಿಗಾಗಿ ನಿರಂತರ ಹೋರಾಟ ಮಾಡಲಾಗುತ್ತಿದೆ.ಶ್ರೀ ಡಿ.ವಿ. ಸದಾನಂದಗೌಡ ಅವರು ಮುಖ್ಯಮಂತ್ರಿಗಳಾಗಿದ್ದಾಗ ಒಳಮೀಸಲಾತಿ ಕುರಿತು ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಯಿತು. ಆಯಾ ಜಾತಿಗಳ ಜನಸಂಖ್ಯೆಗೆ ಅನುಗುಣವಾಗಿ ಶೇಕಡಾವಾರು 6ರಷ್ಟು ಮಾದಿಗ, ಉಪ ಜಾತಿ ಶೇಕಡಾ 5ರಷ್ಟು ಹೊಲೆಯ, ಶೇಕಡಾ 3ರಷ್ಟು ಲಂಬಾಣಿ, ಇತರೆ ಶೇಕಡಾ ಒಂದರಷ್ಟು ಮೀಸಲಾತಿಗೆ ಶಿಫಾರಸ್ಸು ಮಾಡಲಾಗಿತ್ತು. ರಾಜ್ಯ ಸರ್ಕಾರವು ಇಲ್ಲಿಯವರೆಗೂ ಯಾವುದೇ ಕ್ರಮ ಕೈಗೊಳ್ಳದೇ ವಿಳಂಬ ಕಾರ್ಯಹರಣ ಮಾಡಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸರ್ಕಾರವು ಒಳ ಮೀಸಲಾತಿ ನೀತಿಯನ್ನು ತಿದ್ದುಪಡಿ ಮಾಡಿ ಶೇಕಡಾ 6, ಐದೂವರೆ, ಶೇಕಡಾ ಒಂದರಷ್ಟು ನ್ಯಾಯಮೂರ್ತಿ ನಾಗಮೋಹನದಾಸ್ ಅವರ ವರದಿಯಂತೆ ಮಾಡಿ ಕೇಂದ್ರ ಸರ್ಕಾರಕ್ಕೆ ಕಳಿಸಲಾಗಿತ್ತು. ಆದಾಗ್ಯೂ, ಅದನ್ನು ಅನುಷ್ಠಾನಕ್ಕೆ ತರಲಿಲ್ಲ. ಕಳೆದ ವಿಧಾನಸಭಾ ಚುನಾವಣೆ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷವುನ್ಯಾಯಮೂರ್ತಿಎ.ಜೆ.ಸದಾಶಿವ್‌ಆಯೋಗದ ವರದಿಯನ್ನು ಜಾರಿಗೊಳಿಸುವ ಕುರಿತು ಭರವಸೆ ನೀಡಿತ್ತು. ಈಗ ಸರ್ವೋಚ್ಚ ನ್ಯಾಯಾಲಯವೂ ಸಹ ತೀರ್ಪು ನೀಡಿ ರಾಜ್ಯ ಸರ್ಕಾರಕ್ಕೆ ಅಧಿಕಾರ ಕೊಟ್ಟಿದ್ದು, ಆದ್ದರಿಂದ ಯಾವುದೇ ಅಡೆತಡೆ ಇಲ್ಲದೇ ಕೊಟ್ಟ ಭರವಸೆಯಂತೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಒಳಮೀಸಲಾತಿಯನ್ನು ಜಾರಿಗೆ ತರಬೇಕು.

ಕಾಂಗ್ರೆಸ್ ಸರ್ಕಾರ ಅಧಿಕಾರ ಚುಕ್ಕಾಣಿ ಹಿಡಿದ ನಂತರದ ಮೊದಲ ಸಚಿವ ಸಂಪುಟ ಸಭೆಯಲ್ಲಿಯೇ ಸದಾಶಿವ ಆಯೋಗದ ವರದಿ ಜಾರಿ ವಿಚಾರದಲ್ಲಿ ತಿರ್ಮಾನ ಕೈಗೊಳ್ಳುವುದಾಗಿ ಪಕ್ಷ ಭರವಸೆ ನೀಡಿತ್ತು ಆದರೆ ವರ್ಷ ಕಳೆದರೂ ಯಾವುದೂ ಆಗಿಲ್ಲ .ಈ ಕಾರಣಕ್ಕೆ ಎಡಗೈ ಸಮಾಜದ ಪದೆ ಪದೆ ಹೋರಾಟ ನಡೆಸುವುದು ಅನಿವಾರ್ಯ ಎದುರಾಗಿದೆ. ಸರ್ಕಾರ ಇದಕ್ಕೆ ಅವಕಾಶ ನೀಡಬಾರದು ತುಳಿತಕ್ಕೆ ಒಳಗಾದ, ಅವಕಾಶ ವಂಚಿತ, ಶೋಷಿತ ಸಮುದಾಯಕ್ಕೆ ನ್ಯಾಯ ಕೊಡುವ ಕೆಲಸವನ್ನು ತಕ್ಷಣ ಮಾಡಬೇಕು. ರಾಜ್ಯದಲ್ಲಿನ ಜನಸಂಖ್ಯೆಗೆ ಅನುಗುಣವಾಗಿ ನೆಲ-ಜಲ, ಸಂಪತ್ತು -ಸವಲತ್ತು ಶಿಕ್ಷಣ -ಉದ್ಯೋಗ ಎಲ್ಲಾ ವರ್ಗಗಳಿಗೂ ಹಂಚಿಕೆಯಾಗುವಂತೆ ನೋಡಿಕೊಳ್ಳಬೇಕು.ಕೂಡಲೇ ಒಳಮೀಸಲಾತಿ ಜಾರಿಗೆ ಮಾಡಬೇಕೆಂದು ಆಗ್ರಹಿಸಿದರು.

# ಸಂಘಟನೆಗಳು ಸಮಾಜದ ಧ್ವನಿಯಾಗಬೇಕು



**ರಬಕವಿ-ಬನಹಟ್ಟಿ :** ಸಂಘ ಸಂಸ್ಥೆಗಳು ಸಮಾಜದ ಧ್ವನಿಯಾಗಿ ಕೆಲಸ ಮಾಡಬೇಕೆಂದು ಬನಹಟ್ಟಿಯ ಹಿರೇಮಠದ ಶ್ರೀ ಶರಣಬಸವ ಶಿವಾಚಾರ್ಯರು ನುಡಿದರು. ಅವರು ತಾಲೂಕಿನ ನಾವಲಗಿ ಗ್ರಾಮದಲ್ಲಿ ಜಂಗಮ ಸಮಾಜದ ವತಿಯಿಂದ ಶ್ರೀ ಜಗದ್ಗುರು ರೇಣುಕಾಚಾರ್ಯ ಯುವಕ ಸಂಘದ ಉದ್ಘಾಟನೆ ಸಮಾರಂಭದ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದರು.

ಸಮಾಜದಲ್ಲಿರುವ ಬಡವರಪರ ಟೊಂಕಕಟ್ಟಿ ಸರ್ವ ಪದಾಧಿಕಾರಿಗಳು ನಿಂತುಕೊಂಡು ಅವರನ್ನು ಮೇಲೆತ್ತುವ ಕಾರ್ಯ ಮಾಡಿದಾಗ ಮಾತ್ರ ಸಂಘ ಸ್ಥಾಪನೆಗೊಂಡಿರುವುದಕ್ಕೆ ನಿಜಕ್ಕೂ ಸಾರ್ಥಕವಾಗುತ್ತದೆ ಎಂದು ಹೇಳಿದರು.

ತೇರದಾಳ- ನಾವಲಗಿಯ ಗಂಗಾಧರ ಶ್ರೀಗಳು ಮಾತನಾಡಿ ಸಂಘಟನೆಯಿಂದ ಸಮಾಜಕ್ಕೆ ಬಲ ಬರುತ್ತದೆ. ಸರ್ವ ಸದಸ್ಯರು ಹೊಂದಾಣಿಕೆಯಿಂದ ಪ್ರತಿಯೊಬ್ಬರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಗ್ಗಟ್ಟಿನಿಂದ ಕೆಲಸ ಮಾಡಬೇಕೆಂದರು.

ಪ್ರವಚನ ಕೇಸರಿ ಶ್ರೀಶೈಲಯ್ಯ ಹಿರೇಮಠ ಶ್ರೀಗಳು ಪ್ರಾಸ್ತಾವಿಕವಾಗಿ ಮಾತನಾಡಿದರು.

ವೇದಿಕೆಯ ಮೇಲೆ ಮರೇಗುದ್ದಿಯ ಅಡವಿ ಸಿದ್ಧೇಶ್ವರ ಮಠದ ಗುರುಪಾದ ಸ್ವಾಮೀಜಿ, ಮುತ್ತಿನಕಂತಿಮಠದ ಶಿವಲಿಂಗ ಶಿವಾಚಾರ್ಯರು, ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ, ವಿದ್ಯಾಧರ ಸವದಿ, ಜಮಖಂಡಿಯ ಜಂಗಮ ಸಮಾಜದ ಹಿರಿಯರಾದ ಅಶೋಕ ಗಾಂವಿ, ದುರದುಂಡಯ್ಯ ಲಿಂಗದ, ಶಿವಪುತ್ರಯ್ಯ ಸಿದ್ದಗಿರಿಮಠ, ಗ್ರಾಮ ಪಂಚಾಯತ್ ಅಧ್ಯಕ್ಷ ಸದಾಶಿವ ಸವದಿ, ಸಾಹಿತಿ ಶಿವಾನಂದ ಬಾಗಲಕೋಟಮಠ, ಬಸಯ್ಯ ಹಿರೇಮಠ, ಗುರು ಮರಡಿಮಠ, ಶಿವಲಿಂಗಯ್ಯ ಅಮ್ಮಣಗಿಮಠ, ಅಶೋಕ ಮರಡಿಮಠ, ಮುಪ್ಪಯ್ಯ ಹಿರೇಮಠ, ಶಿವಲಿಂಗಯ್ಯ ಅಮಣ್ಣಿಗಿಮಠ, ಮಲ್ಲಪ್ಪ ಗಣಿ, ದಾನಪ್ಪ ಆಸಂಗಿ, ಬಸಯ್ಯ ಹಿರೇಮಠ, ಸಂಘದ ಅಧ್ಯಕ್ಷ ಗಂಗಯ್ಯ ಹಿರೇಮಠ, ಕುಮಾರ ಹಿರೇಮಠ, ಬಸಯ್ಯ ಕಾಡದೇವರ, ಮಹಾಂತೇಶ ಕಾಡದೇವರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಚರಂಡಿಯಲ್ಲಿ ಕಾಲು ಜಾರಿ ಬಿದ್ದಿರುವ ಆಕಳನ್ನು ಜೀವಂತವಾಗಿ ರಕ್ಷಣೆ ಮಾಡಿದ ಜಮಖಂಡಿ ಅಗ್ನಿಶಾಮಕ ದಳದ ಸಿಬ್ಬಂದಿಯವರು

**ಜಮಖಂಡಿ :** ಬಾಗಲಕೋಟ ಜಿಲ್ಲೆಯ ಜಮಖಂಡಿಯ ನಗರದ ನೀರಾವರಿ ಇಲಾಖೆಯ ವಾಸತಿ ಗೃಹಗಳ ಹತ್ತಿರ ಚರಂಡಿಯಲ್ಲಿ ಆಕಳು ಕಾಲು ಜಾರಿ ಬಿದ್ದಿರುವದನ್ನು ಕಂಡು ಶ್ರೀ ಇಬ್ರಾಹಿಂ ಗೊಗಿ ಶಿಕ್ಷಕರು ಜಮಖಂಡಿ ಅಗ್ನಿಶಾಮಕ ಠಾಣೆಗೆ ಕರೆ ಮಾಡಿ ತಿಳಿದಾಕ್ಷಣ ಘಟನಾ ಸ್ಥಳಕ್ಕೆ ಶ್ರೀ ರಾಜು ತಳವಾರ ಅಗ್ನಿಶಾಮಕ ಠಾಣಾಧಿಕಾರಿ ಯವರ ನೇತೃತ್ವದ ತಂಡ ಜಲ ವಾಹನ ಮತ್ತು ಸಿಬ್ಬಂದಿ ಯವರು ಘಟನಾ ಸ್ಥಳಕ್ಕೆ ರಕ್ಷಣಾ ಸಾಮಗ್ರಿ ಗಳೊಂದಿಗೆ ಆಗಮಿಸಿ 10 ಅಡಿ ಆಳದ ಅಳತೆಯ ಒಳ ಚರಂಡಿಯಲ್ಲಿ ಬಿದ್ದ ಬೀದಿ ಆಕಳನ್ನು ಕಷ್ಟ ಪಟ್ಟು ಸುಮಾರು 01:00 ಒಂದು ಗಂಟೆಗಳ ಕಾಲ ಕಾರ್ಯಚರಣೆಯನ್ನು ಮಾಡಿ ಆಕಳನ್ನು ಜೀವಂತವಾಗಿ ಚರಂಡಿಯಿಂದ ಹೊರ ತೆಗೆದು ರಕ್ಷಣೆ ಮಾಡಲಾಯಿತು.



ಆಕಳ ಪ್ರಾಣ ಕಾಪಾಡಿದ ಜಮಖಂಡಿ ಅಗ್ನಿಶಾಮಕ ಇಲಾಖೆಯ ಸಿಬ್ಬಂದಿಯವರಿಗೆ ಸೇರಿರುವ ಸಾರ್ವಜನಿಕರು ಹಾಗೂ ವಸತಿ ಗೃಹದ ಸಿಬ್ಬಂದಿಯವರು ಚಪ್ಪಾಳೆ ಮೂಲಕ ಧನ್ಯವಾದಗಳನ್ನು ತಿಳಿಸಿದರು. ಹಾಗೂ ಹಸ್ತಲಾಘವ ಮಾಡಿ ಅಭಿನಂದಿಸಿದರು. ಬೀದಿ ಆಕಳು ಹಸುವಿನ ಜೀವ ಉಳಿಸಿವ ಕೆಲಸಕ್ಕೆ ಅಗ್ನಿಶಾಮಕ ದಳದವರ ಸೇವೆ ಅಮೋಘ ಎಂದು ಬಣಿಸಿದರು.

ಈ ರಕ್ಷಣಾ ಕಾರ್ಯಚರಣೆಯಲ್ಲಿ ಶ್ರೀ ರಾಜು ತಳವಾರ ಅಗ್ನಿಶಾಮಕ ಠಾಣಾಧಿಕಾರಿಯವರು, ಶ್ರೀ ಏನ್ ಪಿ ಹೂಗಾರ ಂಖಔ, ಸಿಬ್ಬಂದಿಗಳಾದ. ಶ್ರೀ ಅಶೋಕ್ ಹಳಿಗೌಡರ, ಶ್ರೀ ಪ್ರಕಾಶ ಯಲಶೆಟ್ಟಿ , ಆನಂದ್ ಹನಬರಟ್ಟಿ, ಶ್ರೀ ಕೆ.ಬಿ. ಮುಲ್ಲಾ,

ಶ್ರೀಧರ್ ಮಾಳಶೆಟ್ಟಿ,ಶ್ರೀ ಬಿ.ಎಸ್ ರೊಳ್ಳಿ, ಶ್ರೀ ಬಿ.ಎಸ್. ಬಿರಾದಾರ್, ಶ್ರೀ ಎಸ್. ಎಸ್. ಕುಂಬಾರ,ಶ್ರೀ ಬಿ.ವೈ. ಮೆಳ್ಳಿಗೇರಿ. ಸ್ಥಳೀಯರು ಕಾರ್ಯಾಚರಣೆಯಲ್ಲಿ ಹಾಜರಿದ್ದರು.

# ಗ್ಯಾರಂಟಿ ಮುಂದಿಟ್ಟುಕೊಂಡು ಮತ ಕೇಳುತ್ತೇವೆ



**ಹುಬ್ಬಳ್ಳಿ :** ಕಾಂಗ್ರೆಸ್ ಜಾರಿಗೆ ತಂದ ಜನಪರ ಕಾರ್ಯಕ್ರಮಗಳು ಹಾಗೂ ಗ್ಯಾರಂಟಿ ಯೋಜನೆಗಳನ್ನು ಮುಂದಿಟ್ಟುಕೊಂಡು ವಿಧಾನಸಭೆ 3 ಕ್ಷೇತ್ರಗಳ ಉಪ ಚುನಾವಣೆಯಲ್ಲಿ ಜನರ ಮತ ಕೇಳುತ್ತೇವೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಮಂಜುನಾಥ ಭಂಡಾರಿ ಹೇಳಿದರು.

ಹುಬ್ಬಳ್ಳಿಯಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಶಿಗ್ಗಾಂವಿ ವಿಧಾನಸಭೆ ಉಪ ಚುನಾವಣೆಯ ಉಸ್ತುವಾರಿ ಜವಾಬ್ದಾರಿ ನನಗೆ ವಹಿಸಲಾಗಿದೆ.

ಕಾಂಗ್ರೆಸ್ ಪಕ್ಷದ ಸಾಧನೆ ಹಾಗೂ 5 ಗ್ಯಾರಂಟಿ ಕಾರ್ಯಕ್ರಮಗಳನ್ನು ಜನತೆಗೆ ಹೇಗೆ ತಲುಪಿಸಿದ್ದೇವೆ ಎಂಬುದನ್ನು ಮತದಾರರಿಗೆ ಮನವರಿಕೆ ಮಾಡಿಕೊಡುತ್ತೇವೆ ಎಂದರು.

ಕಾಂಗ್ರೆಸ್ ಕರ್ನಾಟಕದಲ್ಲಿ ಅಧಿಕಾರದಲ್ಲಿ ಇರುವಾಗ ಉಪ ಚುನಾವಣೆಯಲ್ಲಿ ಬಹಳಷ್ಟು ಜನ ಟಿಕೆಟ್ ಆಕಾಂಕ್ಷಿಗಳಾಗಿರುವುದು ಸಹಜ. ಅಜ್ಜಪೀರ ಖಾದ್ರಿ ಅವರಿಗೆ ಶಿಗ್ಗಾಂವ ಟಿಕೆಟ್ ಸಿಗಬಹುದು ಎಂದು ಅವರ ಬೆಂಬಲಿಗರು ಭಾವಿಸಿದ್ದರು. ಆದರೆ, ಪಕ್ಷದ ನಾಯಕರು ಕೆಲವು ಮಾನದಂಡಗಳನ್ನು ನಿರ್ಧರಿಸಿಕೊಂಡು ಪಠಾಣ್ ಅವರಿಗೆ ಟಿಕೆಟ್ ನೀಡಿದ್ದಾರೆ. ಇದಾಗ ಬಳಿಕ ಪಕ್ಷದ ವರಿಷ್ಠರು ಖಾದ್ರಿ ಅವರನ್ನು ಸಂಪರ್ಕ ಮಾಡಿದ್ದಾರೆ. ಅವರ ಮನವೊಲಿಸಿದ್ದಾರೆ ಎಂದ ಅವರು ಕಾಂಗ್ರೆಸ್ ಅಭ್ಯರ್ಥಿಗೆ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದರು.

# ಉತ್ತಂಗಿ ಚನ್ನಪ್ಪನವರ ಜೀವನ ಹಾಗೂ ಸಾಧನೆ ಕುರಿತು ಉಪನ್ಯಾಸ

**ಧಾರವಾಡ :** ರೆ. ಉತ್ತಂಗಿ ಚನ್ನಪ್ಪನವರ ನೆನಹು ಸಮಸ್ತ ಕನ್ನಡಿಗರಿಗೆಲ್ಲಾ ಉದಯಕಾಲ. ಅವರು ಕನ್ನಡ ನಾಡು ಕಂಡ ಒಬ್ಬ ಸರ್ವಶ್ರೇಷ್ಠ ಅನುಭಾವಿಗಳು ಎಂದು ನಿವೃತ್ತ ಪ್ರಾಚಾರ್ಯರಾದ ಡಾ. ಆರ್. ಬಿ. ಚಿಲುಮಿ ಅಭಿಪ್ರಾಯಪಟ್ಟರು.

ನಗರದ ಕ.ವಿ.ವ ಸಂಘದಲ್ಲಿ ಆಯೋಜಿಸಲ್ಪಟ್ಟ ರೆ. ಉತ್ತಂಗಿ ಚನ್ನಪ್ಪನವರ ದತ್ತಿ ಕಾರ?ಯಕ್ರಮದಲ್ಲಿ 'ರೆ. ಉತ್ತಂಗಿ ಚನ್ನಪ್ಪನವರ ಜೀವನ ಹಾಗೂ ಸಾಧನೆ' ಕುರಿತು ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ರೆ. ಉತ್ತಂಗಿ ಚನ್ನಪ್ಪನವರು ಕನ್ನಡ ನಾಡಿನಲ್ಲಿ ಹುಟ್ಟಿ ಕ್ರೈಸ್ತ ಸಮಾಜದಲ್ಲಿ ಬೆಳೆದು, ಕಷ್ಟಪಟ್ಟು ಕನ್ನಡತನವನ್ನು ಉಳಿಸಿದ್ದಾರೆ. ಅವರು ಲಿಂಗಾಯತ ಧರ್ಮ ಕುರಿತು ಸುಮಾರು ಎಂಟು ಕೃತಿಗಳನ್ನು ಕ್ರೈಸ್ತ ಸಮಾಜ ಕುರಿತು ಐದು ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. 2 ಧರ್ಮಗಳ ನಡುವಿನ ಪ್ರೀತಿಯ ಸೇತುವೆಯಾದರು. ಸರಳತೆಯ ಚನ್ನಪ್ಪನವರಲ್ಲಿ ಯೇಸು ಸ್ವಾಮಿಯಲ್ಲಿದ್ದ ಅಪಾರ ಕ್ಷಮಾಗುಣ ಹಾಗೂ ಇತರರನ್ನು ಪ್ರೀತಿಸುವ ಗುಣಗಳಿದ್ದವು. ರೆ. ಉತ್ತಂಗಿ ಚನ್ನಪ್ಪ ಅವರು 43 ವರ್ಷಗಳ ಕಾಲ ಕ್ರೈಸ್ತ ಸೇವೆ ಮಾಡಿದ್ದರಿಂದ ಡಾ. ಎಸ್. ಆರ್. ಗುಂಜಾಳ ಅವರ ಒಡನಾಟದಿಂದ ಶ್ರೇಷ್ಠ ಜ್ಞಾನಿಗಳಾಗಲು ಸಾಧ್ಯವಾಯಿತು.





ಕವಿ ಸರ್ವಜ್ಞನನ್ನು ರೆ. ಉತ್ತಂಗಿ ಚನ್ನಪ್ಪನವರು ಬೆಳಕಿಗೆ ತಂದ- ರೆ, ರೆ. ಉತ್ತಂಗಿ ಚನ್ನಪ್ಪ ಅವರನ್ನು ಡಾ. ಎಸ್. ಆರ್. ಗುಂಜಾಳರು ಇಡೀ ಪ್ರಪಂಚಕ್ಕೆ ಪರಿಚಯಿಸಿದರು. ಸರ್ವಜ್ಞನ ವಚನಗಳನ್ನು ಸಂಗ್ರಹಿಸಿ ದಾಖಲೀಕರಿಸುವಲ್ಲಿ ಅವರು ಪಟ್ಟ ಶ್ರಮ ಹಾಗೂ ಬದ್ಧತೆ ಅಪಾರವಾಗಿದೆ. ಕೆಲಕಾಲ ರೆ. ಉತ್ತಂಗಿಯವರು ಹರಿಜನೋದ್ಧಾರಕ್ಕೆ, ರೋಗಿಗಳ ಸೇವೆಯಲ್ಲಿ ದುಡಿ-ದರು. ಅವರೊಬ್ಬ ಮರೆಯಲಾರದ ಮಹಾನುಭಾವರು. ಅವರ ಮರೆವು ಒಂದು ಆಸ್ತಮಾನ ಎಂದು ಹೇಳಿದರು.

ಹಿರಿಯ ವಿಮರ್ಶಕ ಡಾ. ಶ್ಯಾಮಸುಂದರ ಬಿದರಕುಂದಿ, ಶ್ರೀನಿವಾಸ ದೇಸಾಯಿ ಅವರೆ ಬರೆದ ಸರ್ವಜ್ಞನ ನೂ-ರೊಂದು ವಚನಗಳು ಹಾಗೂ ಡಾ. ಎಸ್. ಆರ್. ಗುಂಜಾಳರ ನನ್ನ ಆತ್ಮ ಚರಿತೆ ಎರಡು ಕೃತಿ ಲೋಕಾರೆಣ ಮಾಡಿ ಮಾತನಾಡಿ, ಶ್ರೀನಿವಾಸ ದೇಸಾಯಿ ವೃತ್ತಿಯಿಂದ ಇಂಜೀನೀಯರ ಆಗಿದ್ದರೂ ಸುಮಾರು 38 ವಿಭಿನ್ನ ವಿಷಯಗಳ ಕೃತಿ ರಚಿಸಿದ್ದಾರೆ. ಸರ್ವಜ್ಞನ ನೂರೊಂದು ವಚನಗಳ ಕೃತಿಯಲ್ಲಿ ಕನ್ನಡದ ಜೊತೆಗೆ, ಸಂಸ್ಕೃತ, ಹಿಂದಿ ಹಾಗೂ ಇಂಗ್ಲೀಷ ಭಾಷೆಯಲ್ಲೂ ವ್ಯಾಖ್ಯಾನ ಮಾಡಿದ್ದು ಶ್ಲಾಘನೀಯ. ಈ ಅನುವಾದ ಎಲ್ಲಾ ಭಾಷೀಕರಿಗೂ ಅನುಕೂಲವಾಗುವ ಕೃತಿಯಾಗಿದೆ. ಸರ್ವಜ್ಞನ ತ್ರಿಪದಿಗಳು ಮನೋಜ್ಞವಾಗಿದ್ದು ಎಲ್ಲರಿಗೂ ಅರ್ಥವಾಗುವಂತೆ ಇವೆ. ಸಮಾಜದ ವೈದ್ಯನಾಗಿ ಸಮಾಜ ತಿದ್ದುವ ಕಾರ್ಯ ಸರ್ವಜ್ಞ ಮಾಡಿದ್ದಾನೆ. ಈ ವಚನಗಳು ಲೋಕಾನುಭವದ ಕಣಜವಾಗಿವೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಧಾರವಾಡದ ಹೆಬಿಕ್ ಮೆಮೊರಿಯಲ್ಲ ಚರ್ಚಿನ ನಿವೃತ್ತ ಪಾಸ್ಟರ ರೆ. ಎಸ್. ಎಸ್. ಸಕ್ರಿ ಮಾತನಾಡಿ ಕ.ವಿ.ವ ಸಂಘವು ದತ್ತಿ ಮೂಲಕ ರೆ. ಉತ್ತಂಗಿ ಚನ್ನಪ್ಪನವರನ್ನು ಜೀವಂತವಿರಿಸಿದ್ದಾರೆ. ಅವರ ಹೆಸರು ಚಿರಸ್ಥಾಯಿಗೊಳಿಸಿದ್ದಾರೆ. ವಿನಮ್ರತೆಗೆ ಪಾಂಡಿತ್ಯಕ್ಕೆ ಎಲ್ಲರನ್ನು ಪ್ರೀತಿಸುವ ಗುಣಕ್ಕೆ ಅವರ ಸರಿಸಮ ವ್ಯಕ್ತಿಗಳು ಅಪರೂಪ ಎಂದು ಹೇಳಿದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಡಾ. ಎಸ್. ಆರ್. ಗುಂಜಾಳ ಅವರು ರೆ. ಉತ್ತಂಗಿ ಚನ್ನಪ್ಪನವರೊಂದಿಗಿನ ತಮ್ಮ 12 ವರ್ಷದ ಒಳ್ಳೆ ಒಡನಾಟದ ಪ್ರಸಂಗಗಳನ್ನು ಸ್ಮರಿಸಿದರು,

ಪ್ರಮೀಳಾ ಜಕ್ಕಣ್ಣವರ ಪ್ರಾರ್ಥಿಸಿದರು, ವೀರಣ್ಣ ಒಡ್ಡೀನ ಸ್ವಾಗತಿಸಿದರು. ಗುರು ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಂಕರ ಕುಂಬಿ ನಿರ್ವಹಿಸಿದರು, ಡಾ. ಧನವಂತ ಹಾಜವಗೋಳ ವಂದಿಸಿದರು.

ಕಾರ್ಯಕ್ರಮದಲ್ಲಿ ಶಂಕರ ಹಲಗತ್ತಿ, ಶಿವಾನಂದ ಭಾವಿಕಟ್ಟಿ, ನಿಂಗಣ್ಣ ಕುಂಟಿ, ನರಸಿಂಹ ಪರಾಂಜಪೆ, ರಾಮಚಂದ್ರ ಧೋಂಗಡೆ,

ಎಸ್.ಎಸ್. ಹಿರೇಮಠ, ಸದಾಶಿವ ಜನಗೌಡರ, ಮಹಾಂತೇಶ ನರೇಗಲ್, ಸಿದ್ಧಣ್ಣ ಕಂಬಾರ, ಡಾ. ಮಂಜುಳಾ ಛಲವಾದಿ ಸೇರಿದಂತೆ ಮುಂತಾದವರಿದ್ದರು.

# ಬಾವಿಕಟ್ಟಿ ಪ್ಲಾಟಿಗೆ ಮಳೆ ನೀರು. ಸಮಸ್ಯೆ ಇತ್ಯರ್ಥಕ್ಕೆ ಜಿಲ್ಲಾಧಿಕಾರಿಗೆ ಮನವಿ


**ಧಾರವಾಡ :** ನಗರದ ವಾರ್ಡ್ ನಂಬರ್ 12 ರಲ್ಲಿರುವ ಭಾವಿಕಟ್ಟಿ ಪ್ಲಾಟನಲ್ಲಿ ಸಾಮಾನ್ಯವಾಗಿ ಬಡ ಜನರು ವಾಸಿಸುತ್ತಿದ್ದು, ಸದರಿ ವಡ್ಡನಕೆರೆಯಿಂದ ನಗರದ ವಿವಿಧ ಬಡಾವಣೆಗಳಿಂದ ಬರುವ ಒಳಚರಂಡಿ ನೀರಿನ ಕಾಲುವೆ ಹಾಯ್ದು ಸದರಿ ಕಾಲುವೆಯಿಂದ ಪ್ರತಿ ವರ್ಷ ಮಳೆಯಿಂದಾಗಿ ಅಲ್ಲಿರುವ ಮನೆಗಳಿಗೆ ಒಳಚರಂಡಿ ನೀರು ನುಗ್ಗುತ್ತದೆ. ಇದರಿಂದ ಅಲ್ಲಿಯ ನಿವಾಸಿಗಳಿಗೆ ಜೀವನ ನಡೆಸುವುದು ಕಷ್ಟಕರವಾಗಿದೆ ಆದಕಾರಣ ಜಯ ಕರ್ನಾಟಕ ಜನಪರ ವೇದಿಕೆಯ ರಾಜ್ಯ ಉಪಾಧ್ಯಕ್ಷರಾದ ಮುತ್ತು ಬೆಳ್ಳಕ್ಕಿ ನೇತೃತ್ವದಲ್ಲಿ ಶೀಘ್ರವಾಗಿ ಈ ಸಮಸ್ಯೆಯನ್ನು ಬಗೆಹರಿಸಿ ಕೊಡಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ನಗರದ ಕೆಸಿಡಿ, ಮಾಳಮಡ್ಡಿ, ಬಾರಾಕೋಟ್ರಿ,ಶಿವಗಿರಿ ಸೇರಿದಂತೆ ಹಲವು ಬಡಾವಣೆ ನೀರು ಇಲ್ಲಿಗೆ ಬರುತ್ತದೆ. ಈ ಬಾರಿ ಆದ ಮಳೆಗೆ ಮನೆಯಲ್ಲಿ ಇದ್ದ ಕಾಳು ಕಡಿ ಕೂಡಾ ಹಾಳಾಗಿದ್ದಕ್ಕೆ ಊಟ ಮಾಡದೇ ಜನ ಮಳೆ ನೀರು ಹೊರಹಾಕುವಂತೆ ಆಗಿತ್ತು. ಯಾವುದೇ ಜನಪ್ರತಿನಿಧಿ ಕೂಡಾ ಸ್ಥಳಕ್ಕೆ ಬಾರದೇ ಇದು ಇರುವದು ಕೂಡಾ ಇವರ ನಿಷ್ಕಾಳಜಿ ಎದ್ದು ಕಾಣುತ್ತಿದೆ. ಹೀಗಾಗಿ ಅಧಿಕಾರಿಗಳು ಇದನ್ನ ಶಾಶ್ವತವಾಗಿ ಪರಿಹಾರ ಮಾಡಬೇಕು ಎಂದು ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ವೇದಿಕೆಯ ಮುಖಂಡರಾದ ಜಗದೀಶ ಜಾದವ, ಉಮೇಶ ಶಿಂಧೆ ಮಂಜುನಾಥ ಅಂಗಡಿ, ಕೂತ್ಬುದ್ದೀನ್ಬ ಅಳವಾಡಿಕರ, ರಾಮಚಂದ್ರ ಇಂಗಳೆ, ಗುರುಸಿದ್ದಪ್ಪ ಅವ್ವನವರ ರಾಜೇಶ್ವರಿ ಹೊಸೂರ, ಅಂಬರೀಶ ಹಲಗಿ, ಈರಣ್ಣ ಪಾಟೀಲ, ನೀಲಮ್ಮ ಮರವಳ್ಳವರ, ವಿನೋದ್ ಕಾಂಬ್ಳೆ, ಬಿ,ಎಸ ಪಾಟೀಲ. ಕುತೇಬಾಡಿ ಮುನವಳ್ಳಿ ಸಂತೋಷ ಕೊರವರ ಕೃಷ್ಣ ಕಾಪ್ಸೆ ಬಸವಣ್ಣಪ್ಪ ಬೆಟ್ಗೇರಿ ಮುಂತಾದವರು ಉಪಸ್ಥಿತರಿದ್ದರು.

# ಶಾಸ್ತ್ರಿ ಎನ್ನುವ 'ಸಿಂಪಲ್' ವ್ಯಕ್ತಿಯ ಬಗ್ಗೆ ನೀವು ತಿಳಿದುಕೊಳ್ಳಲೇಬೇಕು

ಈ ರಾಜಕಾರಣವೇ ಹೀಗೆ, ಅಧಿಕಾರದ ಗದ್ದುಗೆ ಏರಿದ ತಕ್ಷಣ ವ್ಯಕ್ತಿ ಆರ್ಭಟಿಸತೊಡಗುತ್ತಾನೆ. ದನಿಯಲ್ಲಿನ ಮಾರ್ಧವತೆ ಕಳೆದುಕೊಳ್ಳುತ್ತಾನೆ. ಏಕೆಂದರೆ ಆ ವ್ಯಕ್ತಿಗೆ ಬೇಕಾಗಿರುವುದು ಅಬ್ಬರದ ಪ್ರಚಾರ, ಸ್ವರಕ್ಷಣೆ ಮತ್ತು ಕುರ್ಚಿ ರಕ್ಷಣೆ. ಸಾಮಾನ್ಯವಾಗಿ ಇಂತಹ ನಾಯಕರನ್ನು ದಿನನಿತ್ಯ ನೋಡುತ್ತಲೇ ಇರುತ್ತೇವೆ. ಆದರೆ ಇದಕ್ಕೆ ಅಪವಾದ ಎಂಬಂತೆ ಕೆಲವೊಬ್ಬ ಅಪರೂಪದ ನಾಯಕರು ಮೌನವಾಗಿ ದೇಶ ಮತ್ತು ಜನ ಹಿತಕ್ಕಾಗಿ ದುಡಿಯುತ್ತಿರುತ್ತಾ-ರೆ. ಅಂಥವರು ಎಲ್ಲೋ ಅಪರೂಪ. ಈ ಅಪರೂಪದ ವಿಶಿಷ್ಟ ರಾಜಕಾರಣಿಗಳಲ್ಲಿ ಚಿರಂತನವಾಗಿ ಉಳಿದಿರುವ ಹೆಸರು ಲಾಲ್‌ಬಹುದ್ದೂರ್ ಶಾಸ್ತ್ರಿ . ಶಾಸ್ತ್ರಿಯವರ ವ್ಯಕ್ತಿತ್ವವೇ ವೈಶಿಷ್ಟ್ಯಪೂರ್ಣವಾದದ್ದು. ಈ ದೇಶದ ಎರಡನೇ ಪ್ರಧಾನಿಯಾಗಿ ಅವರು ಆಡಳಿತ ನಡೆಸಿದ್ದು ಕೆಲವು ಕಾಲ ಮಾತ್ರ. ಆದರೆ ಅವರ ಅಸಾಧಾರಣ ವ್ಯಕ್ತಿತ್ವ ಮತ್ತು ಯೋಜನೆಗಳಿಂದಾಗಿ ಸ್ವಾತಂತ್ರ್ಯ ನಂತರ ರಾಜಕಾರಣದ ಆಗಸದಲ್ಲಿ ಧ್ರುವತಾರೆಯಂತೆ ಇಂದಿಗೂ ಮಿನುಗುತ್ತಿದ್ದಾರೆ. ಅವರು ನಮ್ಮನ್ನಗಲಿ 50 ವರ್ಷಗಳೇ ಕಳೆದಿವೆ. ಆದರೆ ಇಂದಿನ ಅಬ್ಬರದ ಪ್ರಚಾರದ ರಾಜಕಾರಣದಲ್ಲಿ ಹೆಜ್ಜೆ ಹೆಜ್ಜೆಗೂ ಈ ವಾಮನಮೂರ್ತಿಯ ನೆನಪು ಕಾಡುತ್ತಲೇ ಇರುತ್ತದೆ. ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ಸ್ವಾತಂತ್ರ್ಯದ ಜೊತೆಗೆ ಬಡತನವನ್ನೂ ಬಳುವಳಿಯಾಗಿ ಕೊಟ್ಟು ಹೋದರು. ಇಂತಹ ಸ್ಥಿತಿಯಲ್ಲಿ ದೇಶವನ್ನು ಮುನ್ನೆಡೆಸುವುದು ಬಹು ಬಾರಿ ಸವಾಲಾಗಿತ್ತು. ನೆಹರು ನಂತರ ಶಾಸ್ತ್ರಿ ಆಡಳಿತ ಚುಕ್ಕಾಣಿ ಹಿಡಿದರು. ಈ ಶಾಸ್ತ್ರಿ ನೆಹರು ಅವರಂತೆ ಅಜಾನುಬಾಹುವೂ ಅಲ್ಲ , ಸುಂದರನೂ ಅಲ್ಲ. ಆಕರ್ಷಕ ವ್ಯಕ್ತಿತ್ವವಂತೂ ಇಲ್ಲವೇ ಇಲ್ಲ. ಆದರೆ ಅವರ ಅದ್ಭುತ ಇಚ್ಛಾಶಕ್ತಿ, ದೇಶಪ್ರೇಮ ಮತ್ತು ಜನಪರ ಕಾಳಜಿಗಳು ಇಡೀ ವಿಶ್ವವನ್ನೇ ಆಕರ್ಷಿಸಿದ್ದವು. ಒಂದು ಮಾತು



ಹೇಳುವುದಾದರೆ ಗಾಂಧೀಜಿ, ಅಂಬೇಡ್ಕರ್ , ಶಾಸ್ತ್ರಿ ಇವರು ಬಾಯಿಂದ ಯಾವ ಸಂದೇಶದ ನುಡಿಮುತ್ತುಗಳನ್ನು ಬಡಬಡಿಸಲಿಲ್ಲ. ಆದರೆ ಅವರ ಮೌಲ್ಯಾಧಾರಿತ ಜೀವನವೇ ಭಾರತೀಯರ ಬದುಕಿನ ವಿಧಾನದ ಆದರ್ಶಗಳಾದವು. ಶಾಸ್ತ್ರೀಜಿ ಅವರು ಅಂದಿನ ಸೀಮಿತ ಸಂಪನ್ಮೂಲಗಳನ್ನೇ ಬಳಸಿಕೊಂಡು ದೇಶವನ್ನು ಮುನ್ನಡೆಸಿದ ಚಾಣಾಕ್ಷತನ, ದಿಟ್ಟತನಗಳು, ಬರೀ ಬಾಯಿ ಮಾತನಲ್ಲೇ ಶತ್ರು ರಾಷ್ಟ್ರಗಳು ಬಾಲ ಮುದುರಿಕೊಳ್ಳುವಂತೆ ಮಾಡಿದ ಅವರು ರಾಜ ತಾಂತ್ರಿಕ ನೈಪುಣ್ಯ ಹಾಗೂ ದಿಟ್ಟತನಗಳು ಅನನ್ಯವಾದವು. ಒಂದು ನಿಗದಿತ ದಾಳಿಯನ್ನೇ ವಿಶ್ವದೆದುರು ಡಂಗೂರ ಸಾರುವ ಇಂದಿನ ರಾಜಕೀಯಕ್ಕೆ ಹೋಲಿಸಿದರೆ ಶಾಸ್ತ್ರಿಯವರ ರಾಜನೀತಿ ಮತ್ತು ರಾಜತಾಂತ್ರಿಕತೆಗಳು ಅದೆಷ್ಟು ಗಂಭೀರವಾಗಿದ್ದವು ಎಂಬುದು ಅರ್ಥವಾಗುತ್ತದೆ( ಯಾವುದೇ ದೇಶ ಶತ್ರು ದೇಶಗಳ ಮೇಲೆ ನಡೆಸುವ ನಿರ್ದಿಷ್ಟ ದಾಳಿ-ಸರ್ಜಿಕಲ್ ಅಟ್ಯಾಕ್ -ಬಗ್ಗೆ ಸಾರ್ವಜನಿಕವಾಗಿ ಬಹಿರಂಗಪಡಿಸುವಂತಿಲ್ಲ).

ಜೈ ಜವಾನ್- ಜೈ ಕಿಸಾನ್:

1964ರಲ್ಲಿ ಅಧಿಕಾರಕ್ಕೆ ಬಂದಾಗ ಜೈವಾನ್-ಜೈಕಿಸಾನ್ ಎಂಬ ಅಭೂತಪೂರ್ವ ಘೋಷಣೆಯೊಂದನ್ನು ಮೊಳಗಿಸಿ ಇಡೀ ದೇಶದಲ್ಲಿ ಸಂಚಲನ ಮೂಡಿಸಿದರು ಶಾಸ್ತ್ರಿ . ದೇಶದ ಉನ್ನತಿ ಸಾಧನೆಗೆ ಪ್ರಜೆಗಳ ಸುರಕ್ಷತೆಗೆ ರೈತರು ಮತ್ತು ವೀರ ಯೋಧರೇ ಮೂಲಾಧಾರ ಎಂಬುದನ್ನು ಜಗತ್ತಿಗೆ ತೋರಿಸಿಕೊಟ್ಟವರು ಶಾಸ್ತ್ರೀ ಜಿ. ಅವರು ಅಧಿಕಾರ ವಹಿಸಿಕೊಂಡಾಗ ಭಾರತವು ಹೊರದೇಶಗಳಿಂದ ಪ್ರಮುಖವಾಗಿ ಅಮೆರಿಕದಿಂದ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿತ್ತು. ಇದಕ್ಕಾಗಿ ಭಾರತ ಹೊರದೇಶಗಳೆದುರು ಮೈ ಬಗ್ಗಿಸಿ ಕೈಯೊಡ್ಡಿ ಬೇಡಬೇಕಾಯಿತು. ಇದೇ ಹೊತ್ತಿನಲ್ಲಿ (1965) ಪಾಕಿಸ್ತಾನದ ವಿರುದ್ಧ ಯುದ್ಧವೂ ಸಂಭವಿಸಿಬಿಟ್ಟಿತು. ದೇಶದಲ್ಲಿ ಭಾರೀ ಕ್ಷಾಮ. ಜನ ಅನ್ನಕ್ಕಾಗಿ ಹಾತೊರೆಯುತ್ತಿದ್ದರು. ಆದರೂ ಶಾಸ್ತ್ರೀಜಿ ಎದೆಗುಂದಲಿಲ್ಲ. ದೇಶದ ಆಹಾರದ ಅಭಾವ, ಹಸಿವಿನಿಂದ ನರಳುತ್ತಿರುವ ಜನರನ್ನು ಗಮನದಲ್ಲಿಟ್ಟುಕೊಂಡು ಹಸಿವು ನೀಗಿಸುವ ನಿಟ್ಟಿನಲ್ಲಿ ವಾರಕ್ಕೊಮ್ಮೆ ಉಪವಾಸ ಆಚರಿಸುವಂತೆ ಇಡೀ ದೇಶಕ್ಕೆ ಮನವಿ ಮಾಡಿಕೊಂಡರು. ಕ್ಲಿಷ್ಟಕರ ಸಂದರ್ಭದಲ್ಲೇ ದೇಶಕ್ಕೆ ಅನ್ನ ನೀಡುವ ರೈತರು ಮತ್ತು ಗಡಿ ಕಾಯುವ ಯೋಧರ ಮಹತ್ವವನ್ನು ಜಗತ್ತಿಗೆ ಸಾರಲು ಜೈ ಜವಾನ್ -ಜೈ ಕಿಸಾನ್ ಎಂಬ ರಣಭೇರಿ ಮೊಳಗಿಸಿದರು.

ಅಮೆರಿಕ ಕಿವಿ ಹಿಂಡಿದ ಶಾಸ್ತ್ರಿ:

ಅಮೆರಿಕದಿಂದ ಆಹಾರ ಧಾನ್ಯ ತರಿಸಿಕೊಳ್ಳುತ್ತಿದ್ದ ಸಂದರ್ಭದಲ್ಲೇ ಶಾಸ್ತ್ರಿಯವರು ಅಮರಿಕದ ಪತ್ರಕರ್ತನೊಬ್ಬನಿಗೆ ನೀಡಿದ ಸಂದರ್ಶನದಲ್ಲಿ ಆ ರಾಷ್ಟ್ರ ವಿಯಟ್ನಾಂ ಮೇಲೆ ಯುದ್ಧ ಸಾರಿದ್ದನ್ನು ಅತ್ಯಂತ ಕಟು ಶಬ್ದಗಳಲ್ಲಿ ಟೀಕಿಸಿದರು. ಇದು ದುರಾಕ್ರಮಣ ಮತ್ತು ಅನ್ಯಾಯದ ಪರಮಾವಧಿ ಎಂದು ಹೇಳುವ ಮೂಲಕ ಅಂದಿನ ಅಮೆರಿಕ ಅಧ್ಯಕ್ಷ ಲಿಂಡನ್ ಜಾನ್ಸನ್ ಅವರ ಕೆಂಗೆಣ್ಣಿಗೆ ಗುರಿಯಾದರು. ಜಾನ್ಸನ್‌ತಕ್ಷಣವೇ ಆಹಾರ ಧಾನ್ಯ ಪೂರೈಕೆಯನ್ನು ಸ್ಥಗಿತಗೊಳಿಸಿಬಿಟ್ಟರು. ಇತ್ತ ದೇಶದಲ್ಲಿ ಹಸಿವಿನ ರುದ್ರ ನರ್ತನ. ಆಹಾರದ ಕೊರತೆ ಆದರೂ ಶಾಸ್ತ್ರೀಜಿ ಧೃತಿಗೆಡಲಿಲ್ಲ. ಆನಂತರದಲ್ಲಿ ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆ(ಯುಎನ್‌ಎಫ್‌ಎಒ) ಅಮೆರಿಕಕ್ಕೆ ತಿಳಿ ಹೇಳಿ ಆಹಾರ ಧಾನ್ಯ ಪೂರೈಕೆ ಪುನರಾರಂಭಿಸುವಂತೆ ಸೂಚಿಸಿದ್ದು ಈಗ ಇತಿಹಾಸ.


ಪಾಕ್ ವಿರುದ್ದ ಯುದ್ಧ:

ಲಾಲ್‌ಬಹುದ್ದೂರ್ ಶಾಸ್ತ್ರಿ ಯಾವುದೇ ಸಮಸ್ಯೆಗಳನ್ನು ದಿಟ್ಟತನ ಹಾಗೂ ಧೈರ್ಯದಿಂದ ಎದುರಿಸುತ್ತಿದ್ದರು. ಆದರೆ ಅಬ್ಬರದ ಪ್ರಚಾರದಲ್ಲಿ ಕಿವಿ ಜೋತವರಲ್ಲ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಪಾಕಿಸ್ತಾನ ವಿರುದ್ಧದ ಸಮರ. ಉಗ್ರರು ಇಂದನಂತೆಯೇ ಅಂದು ಕೂಡ ಗಡಿ ದಾಟಿ ಹಿಂಸಾಚಾರ ನಡೆಸುತ್ತಲೇ ಇದ್ದರು. 1965ರ ಸೆಪ್ಟೆಂಬರ್‌ನಲ್ಲಿ ಉಭಯ ದೇಶಗಳ ನಡುವೆ ಯುದ್ಧ ಆರಂಭವಾಗಿಯೇಬಿಟ್ಟಿತು. ಶಾಸ್ತ್ರಿ ಧೈರ್ಯದಿಂದ ಯುದ್ಧ ಎದುರಿಸಿದರು. ನಾವು ರಕ್ಷಣೆ ನೋಡಿಕೊಳ್ಳುತ್ತೇವೆ. ನಿಮ್ಮ ಕೆಲಸದಲ್ಲಿ ನೀವಿರಿ ಯಾರೂ ಆತಂಕಪಡುವ ಅಗತ್ಯವಿಲ್ಲ ಎಂದು ಭಾರತೀಯರಲ್ಲಿ ಧೈರ್ಯ ತುಂಬಿದರು. ಭಾರತೀಯ ಸೇನೆ ಪಾಕಿಸ್ತಾನವನ್ನು ಹಿಮ್ಮೆಟ್ಟಿಸಿತು. ಯುದ್ಧವೇನೋ ಅದೇ ಸೆಪ್ಟೆಂಬರ್‌ನಲ್ಲಿ ಕೊನೆಗೊಂಡಿತಾದರೂ ಎರಡೂ ಕಡೆ ನಾಲ್ಕೈದು ಸಾವಿರ ಜೀವ ಹಾನಿ, ಅಪಾರ ಆಸ್ತಿ ಹಾನಿ ಉಂಟಾಗಿತ್ತು.

ಚೀನಾಕ್ಕೆ ತಿರುಗೇಟು:

ಭಾರತ ಪಾಕಿಸ್ತಾನ ಯುದ್ಧ ನಡೆಯುತ್ತಿರುವಾಗಲೇ ಇತ್ತ ಚೀನಾ ಕೂಡ ಕ್ಯಾತೆ ಶೂರು ಮಾಡಿತ್ತು. ಭಾರತೀಯ ಸೈನಿಕರು ಕದನ ವಿರಾಮಲ್ಲಂಘಿಸಿ ಅಕ್ರಮವಾಗಿ ನಮ್ಮ ಭೂಪ್ರದೇಶದಲ್ಲಿ ಯುದ್ಧೋಪಕರಣಗಳನ್ನು ಸಂಗ್ರಹಿಸುತ್ತಿದ್ದಾರೆ ಎಂಬ ಗಂಭೀರ ಆರೋಪ ಮಾಡಿತು. ಆದರೆ ಚೀನಾ ಹೇಳುತ್ತಿರುವುದು ಅಪ್ಪಟ ಸುಳ್ಳು ಎಂದು ಶಾಸ್ತ್ರೀಜಿ ವಿಶ್ವಕ್ಕೆ ಮನವರಿಕೆ ಮಾಡಿಕೊಟ್ಟರು. ನಂತರ ಚೀನಾ ತುಟಿ ಬಿಚ್ಚಲಿಲ್ಲ. ಭಾರತ-ಪಾಕಿಸ್ತಾನ ಯುದ್ಧ ಮುಗಿದ ನಂತರ ಎರಡೂ ದೇಶಗಳ ನಡುವೆ ಕದನ ವಿರಾಮ ಘೋಷಿಸಲು ವಿಶ್ವಸಂಸ್ಥೆ ಮುಂದಾಗುವಂತೆ ಶಾಸ್ತ್ರೀಜಿ ನೋಡಿಕೊಂಡರು.

ಈ ಸಂದರ್ಭ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿದ ಪ್ರಧಾನಿ ಶಾಸ್ತ್ರೀಜಿ "ದೇಶದಲ್ಲಿ ಜನ ಹಸಿವಿನಿಂದ ಸಾಯುತ್ತಿದ್ದಾರೆ. ಅಭಿವೃದ್ಧಿ ಕುಂಠಿತಗೊಂಡಿದೆ. ನಾವು ಯುದ್ಧ ಮುಂದುವರೆಸಿದರೆ ದೇಶದ ಜನತೆ ಹಸಿವು-ಬಡತನಗಳಲ್ಲೇ ಸಾಯಬೇಕೆ? ನಮಗೆ ಈಗ ಬೇಕಾಗಿರುವುದು ಶಾಂತಿ ಮತ್ತು ಅಭಿವೃಧ್ಧಿ. ಯುದ್ಧವಲ್ಲ. ನಮ್ಮ ಸೈನಿಕರು ಮತ್ತು ಜನರ ಜೀವಗಳಿಗೆ ಅಪಾರ ಬೆಲೆಯಿದೆ. ಜೀವನಹಾನಿ ಆಸ್ತಿ ಹಾನಿ ತಪ್ಪಬೇಕು ಎಂದು ಗಟ್ಟಿ ಧ್ವನಿಯಲ್ಲಿ ಗುಡುಗಿದರು.





ಮಹಾನ್ ಮುತ್ಸದ್ಧಿ : ತಮ್ಮ ಅಲ್ಪಾವಧಿ ಅಧಿಕಾರದಲ್ಲೇ ಪ್ರಧಾನಿ ಶಾಸ್ತ್ರೀ ರಷ್ಯಾ,ಯುಗೋಸ್ಲಾವಿಯಾ, ಇಂಗ್ಲೆಂಡ್, ಕೆನಡ, ಈಜಿಪ್ಟ್ , ನೇಪಾಳ, ಬರ್ಮ ಮುಂತಾದ ದೇಶಗಳನ್ನು ಸುತ್ತಿ ಭಾರತದ ಪ್ರತಿಷ್ಠೆ, ವರ್ಚಸ್ಸುಗಳನ್ನು ಹೆಚ್ಚಿಸಿದರು. ಈಜಿಪ್ಟ್ ರಾಜಧಾನಿ ಕೈರೋದಲ್ಲಿ ನಡೆದ ಅಲಿಪ್ತ ನೀತಿ ಸಮಾವೇಶ ಮುಗಿಸಿಕೊಂಡು ಹಿಂದಿರುಗುವಾಗ ಒಂದು ವಿಶೇಷ ನಡೆಯಿತು.

ಪಾಕಿಸ್ತಾನದ ಅಂದಿನ ಅಧ್ಯಕ್ಷ ಜನರಲ್ ಮೊಹಮ್ಮದ್ ಅಯೂಬ್ ಖಾನ್ ಅವರು ಶಾಸ್ತ್ರೀಜಿಯನ್ನು ಉಪಾಹಾರಕ್ಕೆ ಆಹ್ವಾನಿಸಿದರು. ಅದನ್ನು ಪ್ರೀತಿಯಿಂದ ಸ್ವೀಕರಿಸಿದ ಶಾಸ್ತ್ರಿ ಎಲ್ಲಾ ಶಿಷ್ಟಾಚಾರಗಳನ್ನು ಬದಿಗೊತ್ತಿ ಕೈರೊದಿಂದ ಬರುವ ಮಾರ್ಗಮಧ್ಯೆ ಕರಾಚಿ ವಿಮಾನ ನಿಲ್ದಾಣದಲ್ಲಿ ಇಳಿದರು. ಅಯೂಬ್ ಖಾನ್ ತಾವೇ ವಿಮಾನ ನಿಲ್ದಾಣ-ಕ್ಕೆ ಬಂದು ಶಾಸ್ತ್ರೀಜಿಯನ್ನು ಸ್ವಾಗತಿಸಿದರು. ಇಬ್ಬರು ನಾಯಕರು ಕೆಲವು ಗಂಟೆಗಳ ಕಾಲ ಒಟ್ಟಿಗಿದ್ದು , ಒಟ್ಟಿಗೆ ಉಪಾಹಾರ ಸೇವಿಸಿದರು. ನಂತರ ಶಾಸ್ತ್ರೀ ಭಾರತಕ್ಕೆ ಹಿಂದಿರಗಿದರು.

ಇದು ಶಾಸ್ತ್ರೀಜಿಯವರ ರಾಜಕೀಯ ಮುತ್ಸದ್ದಿತನ ಮತ್ತು ಧೈರ್ಯ ದಿಟ್ಟತನಗಳ ನಡೆಯಾಗಿತ್ತು. ಆದರೆ ಅದಾವುದನ್ನೂ ಅವರು ಪ್ರಚಾರಕ್ಕೆ ಬಳಸಿಕೊಳ್ಳಲಿಲ್ಲ.

ಅಗಲಿದ ಮಹಾನ್ ಚೇತನ:

ಭಾರತ-ಪಾಕಿಸ್ತಾನಗಳ ನಡುವೆ ಕದನ ವಿರಾಮ ಘೋಷಣೆಯಾದ ನಂತರ ಉಜ್ಬೇಕಿಸ್ತಾನದ ಮುಖ್ಯಸ್ಥ ಅಲೆಕ್ಸಿ ಕೊಸಿಗಿನ್ ಅವರು ತಾಷ್ಕೆಂಟ್‌ನಲ್ಲಿ ಏರ್ಪಡಿಸಿದ ಸಂಧಾನ ಸಭೆಯಲ್ಲಿ ಶಾಸ್ತ್ರೀಜಿ ಮತ್ತು ಪಾಕ್ ಅಧ್ಯಕ್ಷ ಅಯೂಬ್ ಖಾನ್ ಪಾಲ್ಗೊಂಡಿದ್ದರು. 1966ರ ಜ.10ರಂದು ಇಬ್ಬರು ನಾಯಕರೂ ಕೊಸಿಗಿನ್ ಉಪಸ್ಥಿತಿಯಲ್ಲಿ ತಾಷ್ಕೆಂಟ್ ಒಪ್ಪಂದಕ್ಕೆ ಸಹಿ ಹಾಕಿದರು. ಇದೇ ಸಂತೋಷದಲ್ಲಿ ತಾಷ್ಕೆಂಟ್‌ನ ಅತಿಥಿ ಭವನದಲ್ಲಿ ರಾತ್ರಿ ಮಲಗಿದ ಭಾರತದ 2ನೇ ಪ್ರಧಾನಿ ಶಾಸ್ತ್ರಿ ಜ.11ರ ಸೂರ್ಯೋದಯವನ್ನು ನೋಡಲೇ ಇಲ್ಲ. ಶಾಸ್ತ್ರೀಜಿ 1966 ಜ.11 ಬೆಳಗಿನ ಜಾವ ಹೃದಯಾಘಾತಕ್ಕೆ ಬಲಿಯಾಗಿದ್ದರು. ಅವರ ಸಾವು ಇಂದಿಗೂ ನಿಗೂಢವಾಗಿಯೇ ಉಳಿದಿದೆ.

* * *

# ವಿವಿಧ ದತ್ತಿನಿಧಿ ಪ್ರಶಸ್ತಿಗಳಿಗಾಗಿ ಪತ್ರಕರ್ತರಿಂದ ಲೇಖನಗಳ ಆಹ್ವಾನ

ಕರ್ನಾಟಕ ಮಾಧ್ಯಮ ಅಕಾಡೆಮಿಯು 2023 ಮತ್ತು 24 ನೇ ಸಾಲಿನ ವಿವಿಧ ದತ್ತಿನಿಧಿ ಪ್ರಶಸ್ತಿಗಳಿಗಾಗಿ ಪತ್ರಕರ್ತರಿಂದ ಲೇಖನಗಳನ್ನು ಆಹ್ವಾನಿಸಿದೆ.

ಬೆಂಗಳೂರಿನ "ಅಭಿಮಾನಿ ಪ್ರಕಾಶನ" ಸಂಸ್ಥೆಯುರಾಜ್ಯಮತ್ತುಜಿಲ್ಲಾಮಟ್ಟದಕನ್ನಡ ಪತ್ರಿಕೆಗಳಲ್ಲಿ "ಸಾಮಾಜಿಕ ಸಮಸ್ಯೆ"ಗಳನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುವ ಲೇಖನ–ವರದಿಗಳಿಗೆ "ಅಭಿಮಾನಿ ಪ್ರಶಸ್ತಿ" ಮೈಸೂರಿನ "ಮೈಸೂರು ದಿಗಂತ" ಪತ್ರಿಕಾ ಸಂಸ್ಥೆಯು "ಮಾನವೀಯ ಸಮಸ್ಯೆ"ಗಳನ್ನು ಪರಿಣಾಮಕಾರಿಯಾಗಿ ಪ್ರತಿಬಿಂಬಿಸುವ ಲೇಖನ–ವರದಿಗಳಿಗೆ "ಮೈಸೂರು ದಿಗಂತ ಪ್ರಶಸ್ತಿ", ಬೆಂಗಳೂರಿನ ಅಭಿಮನ್ಯು ಪತ್ರಿಕಾ ಸಂಸ್ಥೆಯು "ದಮನಿತ ಸಮುದಾಯಗಳ ಪರ ದನಿಯಾದ ಅತ್ಯುತ್ತಮ ಲೇಖನ/ ಅಂಕಣ/ಸಂಪಾದಕೀಯ/ಪರಿಣಾಮಕಾರಿ ವರದಿಗೆ ಅಭಿಮನ್ಯು ಪ್ರಶಸ್ತಿ , ಬೆಂಗಳೂರಿನ "ಪ್ರಜಾ ಸಂದೇಶ" ಪತ್ರಿಕಾ ಸಂಸ್ಥೆಯು ಶೋಷಣೆಯನ್ನು ಪರಿಣಾಮ ಕಾರಿಯಾಗಿ ಬಿಂಬಿಸುವ ಲೇಖನಕ್ಕೆ " ಪ್ರಜಾ ಸಂದೇಶ ದತ್ತಿ ಪ್ರಶಸ್ತಿ " ಈ ದತ್ತಿ ಪ್ರಶಸ್ತಿಗಳು ತಲಾ ಹತ್ತು ಸಾವಿರ ರೂ. ನಗದು ಬಹುಮಾನ ಒಳಗೊಂಡಿದೆ. ಸಂಸ್ಥೆಗಳು ದತ್ತಿಯನ್ನು ಕರ್ನಾಟಕ ಮಾಧ್ಯಮ ಅಕಾಡೆಮಿಯಲ್ಲಿ ಸ್ಥಾಪಿಸಿವೆ.



2023 ನೇ ಸಾಲಿನ ಪ್ರಶಸ್ತಿಗಳು: 2023 ಜನವರಿ ಯಿಂದ ಡಿಸೆಂಬರ್–2023 ರವರೆಗೆ, ಪ್ರಕಟವಾಗಿರುವ "ಸಾಮಾಜಿಕ ಸಮಸ್ಯೆ" ಗಳನ್ನು ಪ್ರತಿಬಿಂಬಿಸುವ ಲೇಖನ ವರದಿಗಳಿಗೆ "ಅಭಿಮಾನಿ ಪ್ರಶಸ್ತಿ–2023", "ಮಾನವೀಯ ಸಮಸ್ಯೆ"ಗಳನ್ನು ಪ್ರತಿಬಿಂಬಿಸುವ ಲೇಖನ ವರದಿಗಳಿಗೆ "ಮೈಸೂರು ದಿಗಂತ ಪ್ರಶಸ್ತಿ–2023" ಶೋಷಣೆಯನ್ನು ಪರಿಣಾಮ ಕಾರಿಯಾಗಿ ಬಿಂಬಿಸುವ ಲೇಖನಕ್ಕೆ " ಪ್ರಜಾ ಸಂದೇಶ ಪ್ರಶಸ್ತಿ–2023" ಹಾಗೂ "ದಮನಿತ ಸಮುದಾಯಗಳಪರದನಿಯಾದಅತ್ಯುತ್ತಮ ಲೇಖನ/ ಅಂಕಣ/ ಸಂಪಾದಕೀಯ/ ಪರಿಣಾಮಕಾರಿ ವರದಿಗೆ "ಅಭಿಮನ್ಯು ದತ್ತಿ ಪ್ರಶಸ್ತಿ –2023" ಎಂದು ದಾಖಲಿಸಿ ಪ್ರತ್ಯೇಕವಾಗಿ ಕಳುಹಿಸಬೇಕು.

2024 ನೇ ಸಾಲಿನ ಪ್ರಶಸ್ತಿಗಳು : 2024 ಜನವರಿ ಯಿಂದ ಸೆಪ್ಟೆಂಬರ್ 2024 ರವರೆಗೆ ಪ್ರಕಟವಾಗಿರುವ "ಸಾಮಾಜಿಕ ಸಮಸ್ಯೆ" ಗಳನ್ನುಪ್ರತಿಬಿಂಬಿಸುವಲೇಖನವರದಿಗಳಿಗೆ "ಅಭಿಮಾನಿಪ್ರಶಸ್ತಿ–2024","ಮಾನವೀಯ ಸಮಸ್ಯೆ"ಗಳನ್ನು ಪ್ರತಿಬಿಂಬಿಸುವ ಲೇಖನ ವರದಿಗಳಿಗೆ "ಮೈಸೂರು ದಿಗಂತ ಪ್ರಶಸ್ತಿ–2024" ಶೋಷಣೆಯನ್ನು ಪರಿಣಾಮ ಕಾರಿಯಾಗಿ ಬಿಂಬಿಸುವ ಲೇಖನಕ್ಕೆ " ಪ್ರಜಾ ಸಂದೇಶ ಪ್ರಶಸ್ತಿ–2024 ಹಾಗೂ "ದಮನಿತ ಸಮುದಾಯಗಳ ಪರ ದನಿಯಾದ ಅತ್ಯುತ್ತಮ ಲೇಖನ/ ಅಂಕಣ/ ಸಂಪಾದಕೀಯ/ ಪರಿಣಾಮಕಾರಿಯಾದ ವರದಿಗೆ"ಅಭಿಮನ್ಯುಪ್ರಶಸ್ತಿ–2024ಎಂದು ದಾಖಲಿಸಿ ಪ್ರತ್ಯೇಕವಾಗಿ ಕಳುಹಿಸಬೇಕು.

ಕನ್ನಡ ದೈನಿಕ?ಟಿವಿ–ವಾಹಿನಿ, ವಾರ ಪತ್ರಿಕೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪರ್ತಕರ್ತರು ಹೆಸರು (ಬೈಲೈನ್) ಬರೆದಿರುವ ವರದಿ ಲೇಖನಗಳಿಗೆ ಮಾತ್ರ ಪ್ರಶಸ್ತಿಗೆ ಅವಕಾಶ, ಲೇಖನ ವರದಿಗಳಲ್ಲಿ ಹೆಸರು (ಬೈಲೈನ್) ಪ್ರಕಟವಾಗದಿದ್ದಲ್ಲಿ ಸಂಬಂಧಿಸಿದ ಪತ್ರಿಕೆಯ ಸಂಪಾದಕ ರಿಂದ ದೃಢೀಕರಣ ಪತ್ರವನ್ನು ಪಡೆದು ಕಳುಹಿಸಬೇಕು. ಲೇಖನ–ವರದಿಗಳನ್ನು ಇದೇ ದಿನಾಂಕ : 20/11/2024ರ ಒಳಗಾಗಿ ಕಾರ್ಯದರ್ಶಿ, ಕರ್ನಾಟಕ ಮಾಧ್ಯಮ ಅಕಾಡೆಮಿ "ಅಭಿಮಾನಿ ಪ್ರಶಸ್ತಿ–2023", "ಅಭಿಮಾನಿ ಪ್ರಶಸ್ತಿ–2024" ಹಾಗೂ "ಮೈಸೂರು ದಿಗಂತ ಪ್ರಶಸ್ತಿ–2023" "ಮೈಸೂರುದಿಗಂತಪ್ರಶಸ್ತಿ–2024""ಪ್ರಜಾ ಸಂದೇಶ ಪ್ರಶಸ್ತಿ–2023", "ಪ್ರಜಾ ಸಂದೇಶ ಪ್ರಶಸ್ತಿ–2024" ಹಾಗೂ "ಅಭಿಮನ್ಯುಪ್ರಶಸ್ತಿ –2023", "ಅಭಿಮನ್ಯು ಪ್ರಶಸ್ತಿ–2024" ಎಂದು ಸ್ಪಷ್ಟವಾಗಿ ಬರೆದು ಲೇಖನಗಳನ್ನು ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ. ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು–560001. ಇವರಿಗೆ ಕಳುಹಿಸಲು ಅಥವಾ kmaprashast@gmail.comಗೆ ಇ – ಮೇಲ್ ಮೂಲಕ ಕಳುಹಿಸಲು ಅಕಾಡೆಮಿಯ ಅಧ್ಯಕ್ಷರಾದ ಆಯೇಶಾ ಖಾನಂ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಢವಳಗಿ ಸಮೀಪದ ಬಸರಕೋಡ ಗ್ರಾಮದಲ್ಲಿ ಅಕ್ಟೋಬರ್ 23 ಬುಧವಾರದಂದು ನಡೆದ ಕೃಷಿ ಸಂಪದ ಕಾರ್ಯಕ್ರಮ ಹಾಗೂ ವಸ್ತು ಪ್ರದರ್ಶನ ಕಾರ್ಯಕ್ರಮದಲ್ಲಿ ಧಾರವಾಡ ಕೃಷಿ ವಿಶ್ವವಿದ್ಯಾಲಯ ಕುಲಪತಿಗಳಾದ ಡಾ. ಪಿ ಎಲ್ ಪಾಟೀಲ, ಪ್ರಾಧ್ಯಾಪಕರಾದ ಡಾ. ಸಿ ಆರ್ ಪಾಟೀಲ, ತೋಟಗಾರಿಕೆ ತಜ್ಞ ಡಾ.ಕುಶಾಲ ಮತ್ತು ಸಹ ವಿಸ್ತೀರ್ಣ ನಿರ್ದೇಶಕರಾದ ಡಾ. ಆರ್ ಬಿ ಬೆಳ್ಳಿ, ಕೃಷಿ ಮಹಾವಿದ್ಯಾಲಯ ವಿಜಯಪುರದ ವಿಧ್ಯಾಧಿಕಾರಿಯಾದ ಡಾ. ಭಿಮಪ್ಪ ಎ ಅವರು ಕೃಷಿ ಸಂಪದ ಕಾರ್ಯಕ್ರಮದಲ್ಲಿ ವಸ್ತು ಪ್ರದರ್ಶನವನ್ನು ವೀಕ್ಷಿಸಿದರು.



ಢವಳಗಿ ಸಮೀಪದ ಬಸರಕೋಡ ಗ್ರಾಮದ ಮಾತೋಶ್ರೀ ಶಿವಲಿಂಗಮ್ಮ ಬ ನಾಡಗೌಡರ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿನಿ ಯಾದ ಕುಮಾರಿ ಸವಿತಾ ಸಿದ್ದಪ್ಪ ಟಕ್ಕಳಕಿ ಎಂಬ ವಿದ್ಯಾರ್ಥಿಯು ವಿಜಯಪುರದ ಡಾ.ಬಿ ಆರ್ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಅಕ್ಟೋಬರ್ 26 ಶನಿವಾರದಂದು ನಡೆದ ಪ್ರಾಥಮಿಕ ಶಾಲೆಗಳ ಜಿಲ್ಲಾ ಮಟ್ಟದ ಕ್ರೀಡಾಕೂಟದ ವ್ಯಯಕ್ತಿಕ ಆಟವಾದ 100 ಮೀಟರ್ ಮತ್ತು 200 ಮೀಟರ್ ಓಟದ ಸ್ಪರ್ಧೆಯಲ್ಲಿ ದ್ವಿತಿಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದಕ್ಕೆ ಶಾಲೆಯ ಶಿಕ್ಷಕರು ಮತ್ತು ಸಂಸ್ಥೆಯ ಅಧ್ಯಕ್ಷರು ಮತ್ತು ಪದಾಧಿಕಾರಿಗಳು ವಿಧ್ಯಾರ್ಥಿಗೆ ಅಭಿನಂದನೆಗಳನ್ನು ಸಲ್ಲಿಸಿದರು.

### ಪತ್ರಿಕೆಗಳ ಜಾಹೀರಾತು ತಾರತಮ್ಯ ಕಡಿವಾಣಕ್ಕೆ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಎಸ್.ಕೃಷ್ಣಮೂರ್ತಿ ಆಗ್ರಹ

# ಸಂಪಾದಕರ ಸಂಘದಿಂದ ವಾರ್ತಾಧಿಕಾರಿಗೆ ಮನವಿ

**ತುಮಕೂರು :** ಸ್ಥಳೀಯ, ಪ್ರಾದೇಶಿಕ ದಿನಪತ್ರಿಕೆಗಳಿಗೆ ಜಿಲ್ಲಾ ವಾರ್ತಾ ಇಲಾಖೆ ಮೂಲಕ ಕೊಡಲಾಗುತ್ತಿರುವ ಸರ್ಕಾರಿ ಟೆಂಡರ್ ಜಾಹಿರಾತುಗಳ ತಾರತಮ್ಯವನ್ನು ಸರಿಪಡಿಸುವಂತೆ ಒತ್ತಾಯಿಸಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಹಿಮಂತರಾಜು ಅವರಿಗೆ ಕರ್ನಾಟಕ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘ ಜಿಲ್ಲಾ ಘಟಕದ ವತಿಯಿಂದ ಮಂಗಳವಾರ ಮನವಿ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಎಸ್.ಕೃಷ್ಣಮೂರ್ತಿ, ಕೆಲವು ಪತ್ರಿಕೆಗಳಿಗೆ ಒಂದು ತಿಂಗಳಿಗೆ ಆರೇಳು ಜಾಹಿರಾತುಗಳು ನೀಡುತ್ತಿದ್ದು, ಇನ್ನು ಕೆಲವು ಪತ್ರಿಕೆಗಳಿಗೆ ಎರಡು ಅಥವಾ ಮೂರು ಜಾಹಿರಾತುಗಳನ್ನು ಮಾತ್ರ ನೀಡಲಾಗುತ್ತಿದೆ. ಇದರಲ್ಲೂ ಸಣ್ಣ ಜಾಹಿರಾತುಗಳೇ ಹೆಚ್ಚಾಗಿ ನೀಡುತ್ತಿದ್ದು, ಕೂಡಲೇ ಗಮನ ಹರಿಸಿ ಇಲ್ಲಿ ನಡೆಯುತ್ತಿರುವ ತಾರತಮ್ಯವನ್ನು ಸರಿಪಡಿಸುವಂತೆ ಮನವಿ ಮಾಡಿದರು.

ಇದಕ್ಕೆ ಉತ್ತರಿಸಿದ ವಾರ್ತಾಧಿಕಾರಿ ಹಿಮಂತರಾಜು, ನನಗೂ ಈ ಬಗ್ಗೆ ಸಾಕಷ್ಟು ದೂರುಗಳು ಬಂದಿವೆ. ತಕ್ಷಣ ಕ್ರಮ ವಹಿಸಿ ತಾರತಮ್ಯಕ್ಕೆ ಕಡಿವಾಣ ಹಾಕಲಾಗಿದೆ. ಮುಂದೆ ಆ ರೀತಿ ಆಗದಂತೆ ಸೂಚನೆಯನ್ನೂ ನೀಡಲಾಗಿದೆ ಎಂದು



ಹೇಳಿದರು.

ಜಿಲ್ಲೆಯಲ್ಲಿ ಹಲವು ಕಾಮಗಾರಿಗಳನ್ನು ಒಂದೇ ಟೆಂಡರ್ ಪ್ರಕಟಣೆಯಲ್ಲಿ ಕರೆದಾಗ ಜಾಹೀರಾತು ನೀತಿ 2013 , ಅನುಷ್ಠಾನ ನಿಯಮಗಳು 2014 ರ ನಿಯಮ 16 ರ ಟಿಪ್ಪಣಿಯಲ್ಲಿ ನೀಡಿರುವ ಸೂಚನೆಯಂತೆ ಕಾಮಗಾರಿಗಳ ಮೌಲ್ಯಕ್ಕೆ ಅನುಗುಣವಾಗಿ ಅನ್ವಯವಾಗುವ ಜಿಲ್ಲಾ/ ಪ್ರಾದೇಶಿಕ ಮಟ್ಟದ ಪತ್ರಿಕೆಗಳಿಗೆ ಬಿಡುಗಡೆ ಮಾಡದೇ ಕೇವಲ ರಾಜ್ಯ ಮಟ್ಟದ ಪತ್ರಿಕೆಗಳಿಗೆ ಬಿಡುಗಡೆ ಮಾಡುತ್ತಿರುವ ನಿದರ್ಶನಗಳು ನಮ್ಮ ಕಣ್ಮುಂದೆ ಇವೆ. ಆದುದರಿಂದ ಎಲ್ಲಾ ಸರ್ಕಾರಿ/ ನಿಗಮ ಮಂಡಳಿಗಳ ಜಾಹೀರಾತುಗಳನ್ನು ವಾರ್ತಾ ಇಲಾಖೆಯ ಮೂಲಕವೇ ಕೊಡುವಂತೆ ಕ್ರಮ ಕೈಗೊಳ್ಳಲು ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ. ಎಸ್.ಕೃಷ್ಣಮೂರ್ತಿ ಮನವಿ ಮಾಡಿದರು.

ಸರ್ಕಾರದ 2017 ಜನವರಿ 16ರ ತಿದ್ದುಪಡಿ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸುವುದರ ಮೂಲಕ ಟೆಂಡರ್ ಮತ್ತು ವರ್ಗೀಕೃತ ಜಾಹೀರಾತುಗಳನ್ನು ಆಯಾ ಕಾಮಗಾರಿಗಳ ಕನಿಷ್ಠಮತ್ತುಗರಿಷ್ಠಮೊತ್ತವನ್ನುಪರಿಗಣಿಸಿ ಅನ್ವಯವಾಗುವ ಜಿಲ್ಲಾ/ ಪ್ರಾದೇಶಿಕ/ ರಾಜ್ಯ ಮಟ್ಟದ ಪತ್ರಿಕೆಗಳಿಗೆ ಬಿಡುಗಡೆ ಮಾಡುವಂತೆ ಮನವಿ ಮಾಡಿದರು.

ನಂತರ ಮಾತನಾಡಿದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಹಿಮಂತರಾಜು, ಜಿಲ್ಲಾ ಪಂಚಾಯಿತಿ ಸಿಇಒ ಅವರು ಈಗಾಗಲೇ ಸೂಚಿಸಿದ್ದು, ಸಿಇಒ ಆವರ ಆದೇಶದ ಪ್ರಕಾರ ಮಾಧ್ಯಮ ಪಟ್ಟಿಯಲ್ಲಿರುವ ಎಲ್ಲಾ ಪತ್ರಿಕೆಗಳನ್ನು ಜಿಲ್ಲಾ ಪಂಚಾಯಿತಿಗೆ ಕಳುಹಿಸಿಕೊಡಲಾಗುವುದು ಹಾಗೂ ಸರ್ಕಾರದ ಆದೇಶದಂತೆ ಕ್ರಮ ಜರುಗಿಸಲಾಗುವುದು ಎಂದು ಸಂಪಾದಕರ ಸಂಘಕ್ಕೆ ಭರವಸೆ ನೀಡಿದರು.

ಈ ವೇಳೆ ಸಂಘದ ಜಿಲ್ಲಾಧ್ಯಕ್ಷ ಜಿ.ಕರುಣಾಕರ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಎನ್.ಮಂಜುನಾಥಗೌಡ, ರಾಜ್ಯ ಜಂಟಿ ಕಾರ್ಯದರ್ಶಿ ಸಿ.ರಂಗನಾಥ, ಜಿಲ್ಲಾ ಉಪಾಧ್ಯಕ್ಷ ಪಿ.ಎಸ್. ಮಲ್ಲಿಕಾರ್ಜುನಸ್ವಾಮಿ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಿ.ಎನ್.ಮಹೇಶ್‌ಕುಮಾರ್, ಜಿಲ್ಲಾ ಖಜಾಂಚಿ ಕಂಬಣ್ಣ, ಜಿಲ್ಲಾ ನಿರ್ದೇಶಕ ಬಸವರಾಜು ಹಾಜರಿದ್ದರು.

## ತೆರಿಗೆ ವಸೂಲಾತಿಯಲ್ಲಿ ಪ್ರಗತಿ ಸಾಧಿಸುವಂತೆ ಜಿಲ್ಲಾಧಿಕಾರಿ ಭೂಬಾಲನ್ ಸೂಚನೆ

**ವಿಜಯಪುರ :** ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳು ಆಸ್ತಿ ತೆರಿಗೆ, ನೀರಿನ ಕರ, ವಾಣಿಜ್ಯ ಮಳಿಗೆಗಳ ಬಾಡಿಗೆ, ಜಾಹೀರಾತು, ಟ್ರೇಡ್ ಲೈಸನ್ಸ್ ವಸೂಲಾತಿಗಳಲ್ಲಿ ಪ್ರಗತಿ ಸಾಧಿಸುವಂತೆ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳಿಗೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಸೂಚನೆ ನೀಡಿದರು.

ಗುರುವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿದ್ದ ಅವರು, ತೆರಿಗೆ ವಸೂಲಾತಿಯಲ್ಲಿ ಶೇಕಡಾ ನೂರರಷ್ಟು ಪ್ರಗತಿ ಸಾಧಿಸಬೇಕು. ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಗಳಾದ ಎಸ್‌ಎಫ್‌ಸಿ, 14ನೇ, 15ನೇ ಹಣಕಾಸ, ಕುಡಿಯುವ ನೀರು, ವಸತಿ, ಎಸ್‌ಬಿಎಂ 1.0, 2.0 ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕು. ಜಿಲ್ಲೆಯ ಎಲ್ಲ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಅಂಗಡಿ ಮುಂಗಟ್ಟುಗಳ ನಾಮಫಲಕ ಕಡ್ಡಾಯವಾಗಿ ಕನ್ನಡದಲ್ಲಿ ಇರುವಂತೆ ನೋಡಿಕೊಳ್ಳುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ ಅವರು,

ಕನ್ನಡ ನಾಮಫಲಕ ಅಳವಡಿಕೆಯಲ್ಲಿ ಲೋಪವಾದಲ್ಲಿ ಮುಖ್ಯಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು ಎಂದು ಅವರು ಎಚ್ಚರಿಸಿದರು.

ಸಭೆಯಲ್ಲಿ ಜಿಲ್ಲಾ ನಗರಾಭಿವೃದ್ಧಿಕೋಶದ ಯೋಜನಾ ನಿರ್ದೇಶಕ ಬದ್ರೂದ್ದಿನ್ ಸೌದಾಗರ ಸೇರಿದಂತೆ ಜಿಲ್ಲೆಯ ಪುರಸಭೆ, ಪಟ್ಟಣ ಪಂಚಾಯತ್ ಮುಖ್ಯಾಧಿಕಾರಿಗಳು ಉಪಸ್ಥಿತರಿದ್ದರು.

## ಸರಕಾರಿ ಬಾಲಕೀಯರ ಶಾಲೆಯಲ್ಲಿ ಎಸ್‌ಡಿಎಂಸಿ ರಚನೆ, ಉಪಾಧ್ಯಕ್ಷರಾಗಿ ರಂಗಮ್ಮ ಗೋಸ್ಲ ಕರಡಕಲ್ ಆಯ್ಕೆ




**ಲಿಂಗಸಗೂರು :** ಹಲವಾರು ವರ್ಷಗಳಿಂದ ಎಸ್ ಡಿ ಎಂ ಸಿ ಸಮಿತಿ ರಚನೆಯಾಗದೆ ವಿಳಂಬವಾಗಿತ್ತು ಕೊನೆಗೂ ಮಹೂರ್ತಕೂಡಿ ಬಂದು ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ರಚನೆಯಾಗಿದೆ.

ಪಟ್ಟಣದ ಸರಕಾರಿ ಬಾಲಕೀಯರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಹಳ ವರ್ಷಗಳಿಂದ ಎಸ್ ಡಿ ಎಂ ಸಿ ರಚನೆಯಾಗದೆ ವಿಳಂಬವಾಗಿತ್ತು

ಇಂದು ನಡೆದ ಸಭೆಯಲ್ಲಿ ಸತ್ಯಪ್ಪ ತಂ ರಾಮಣ್ಣ ಅಧ್ಯಕ್ಷರಾಗಿ ಹಾಗೂ ಉಪಾಧ್ಯಕ್ಷರಾಗಿ ರಂಗಮ್ಮ ಗಂ ಅಮರೇಶ ಗೋಸ್ಲೆ ಯಾಗಿದ್ದಾರೆಂದು ಶಾಲೆಯ ಮುಖ್ಯೋಪಾಧ್ಯಾಯರಾದ ಚಂದ್ರಶೇಖರರವರು ತಿಳಿಸಿದ್ದಾರೆ. ಶಾಲಾಸಮಿತಿಯ ಸದಸ್ಯರಾಗಿ ಮುರ್ತುಜಾಸಾಬ, ಮಾರುತಿ ಗೋಸ್ಲೆ, ಬಸವರಾಜ, ಗುರುನಾಥ, ಹನಮಂತ, ಇಬ್ರಾಹಿಂಸಾಬ, ಮಂಜುನಾಥ, ರೇಣುಕಮ್ಮ, ಹನುಮಂತಿ, ದೇವಮ್ಮ, ನಾಗಮ್ಮ, ಖನ್ನೀಸ್, ಹಜ್ರಾಬೇಗಂ, ವನಿತಾ, ಈರಮ್ಮ ಆಯ್ಕೆಯಾಗಿದ್ದಾರೆಎಂದುಸಮಿತಿಯಕಾರ್ಯದರ್ಶಿ ತಿಳಿಸಿದ್ದಾರೆ.

## ಅಮೃತಾ ಸಿದ್ದಪ್ಪ ಚೌರಿ ಕುಸ್ತಿಯಲ್ಲಿ ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದ್ದಾಳೆ

**ಬಾಗಲಕೋಟೆ :** ಜಿಲ್ಲೆಯ ಜಮಖಂಡಿ ತಾಲೂಕಿನ ತೊದಲಬಾಗಿ ಗ್ರಾಮದ ವಿದ್ಯಾರ್ಥಿನಿಯಾದ ಕುಮಾರಿ ಅಮೃತಾ ಸಿದ್ದಪ್ಪ ಚೌರಿ ಈ ವಿದ್ಯಾರ್ಥಿನಿಯು 2024 2025 ನೇ ಸಾಲಿನ ರಾಮನಗರದಲ್ಲಿ ನಡೆದ ರಾಜ್ಯ ಮಟ್ಟದ 17ರ ವಯೋಮಿತಿ ಒಳಗಿನ ಮಹಿಳಾ ಕುಸ್ತಿಯಲ್ಲಿ 40 ಕೆಜಿ ವಿಭಾಗದಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನವನ್ನು ಪಡೆದುಕೊಂಡು ರಾಷ್ಟ್ರಮಟ್ಟಕ್ಕೆ ಆಯ್ಕೆಯಾಗಿದ್ದಾರೆ

ಈ ಸಾಧನೆಯಿಂದ ಗ್ರಾಮದ ತಾಲೂಕಿನ ಜಿಲ್ಲೆಗೆ ಕೀರ್ತಿಯನ್ನು ತಂದಿದ್ದಾಳೆ,

ಈ ವಿದ್ಯಾರ್ಥಿನಿಯು ನಮ್ಮ ತಂದೆ ತಾಯಿ ಪ್ರೇರಣೆಯಿಂದ ಹಾಗೂ ನನಗೆ ಉತ್ತಮ ತರಬೇತಿ ನೀಡಿವರು ರಾಮು ತೋರವಿ, ಶರಣಪ್ಪ ಅರೆಗೋಳ್, ಗಜಾನನ ತೋರವಿ, ಸದಾಶಿವ್ ಪಕಾಲಿ, ಕಾಡೇಶ್ ನ್ಯಾಮಗೌಡ, ರವಿ ಬಸಗೊಂಡ ಎಲ್ಲಾ ಗುರುಗಳ ಮಾರ್ಗದರ್ಶನದಿಂದ ರಾಜ್ಯಮಟ್ಟದಲ್ಲಿ ನನಗೆ ಪ್ರಥಮ ಸ್ಥಾನ ಶುಭ ಪಡೆಯಲ್ಲೂ ಸಾಧ್ಯವಾಯಿತು ಎಂದು ಹೇಳಿದಳು

ಶುಭ ಕೋರುವರು ಸರ್ಕಾರಿ ನೌಕರ ಸಂಘದ ತಾಲೂಕ ಅಧ್ಯಕ್ಷರಾದ ಪಿ ಬಿ ಅಜ್ಜನವರ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕೇಶವಾಧ್ಯಕ್ಷರಾದ ವೈ ಬಿ ಕಾಂಬಳೆ ಮಾದರಿ ಶಾಲೆಯ ಮುಖ್ಯ ಗುರುಗಳಾದ ವೈಸ್ ಎಸ್ ಭಜಂತ್ರಿ ದೈ ಶಿ ಶರಣಪ್ಪ ಅರೆಗೋಳ ಅ, ಶಿ ಅಧ್ಯಕ್ಷರಾದ ಮಾಂತೇಶ ಬಸರಗಿ ಮುಂತಾದವರು ಶುಭ ಕೋರಿದರು.

## ವಕ್ಫ್ ಹೆಸರಲ್ಲಿ ಕೋಮುದ್ವೇಷ ಹರಡಿಸುವವರ ವಿರುದ್ಧ ಸರಕಾರ ಕಠಿಣ ಕ್ರಮ ಜರುಗಿಸಬೇಕು: ವೆಲ್ಫೇರ್ ಪಾರ್ಟಿ

ವಕ್ಫ್ ಹೆಸರಲ್ಲಿ ಕೋಮುಪ್ರಚೋದಿತ ಹೇಳಿಕೆ ನೀಡಿ ರಾಜ್ಯದಲ್ಲಿ ಕೋಮುದ್ವೇಷ ಹರಡಿಸುತ್ತಿರ್ವ ರಾಜಕಾರಣಿಗಳ ವಿರುದ್ಧ ಸರಕಾರ ಕಠಿಣ ಕ್ರಮ ವಹಿಸಬೇಕೆಂದು ವೆಲ್ಫೇರ್ ಪಾರ್ಟಿ ಆಫ್ ಇಂಡಿಯಾ ಕರ್ನಾಟಕ ರಾಜ್ಯ ಅಧ್ಯಕ್ಷ ಅಡ್ವಕೇಟ್ ತಾಹೇರ್ ಹುಸೇನ್ ಆಗ್ರಹಿಸಿದ್ದಾರೆ.

ಚುನಾವಣೆ ಆಸನ್ನವಾದ ಕೂಡಲೇ ಕೋಮು ಸೂಕ್ಷ್ಮ ವಿಚಾರಗಳನ್ನು ತನ್ನ ಅಸ್ತ್ರವನ್ನಾಗಿ ಬಳಸುವ ಬಿಜೆಪಿಯ ಎಂದಿನ ಚಾಳಿಯನ್ನು ಇಲ್ಲಿಯೂ ಮುಂದುವರಿಸಿದೆ. ಅಲ್ಪ ಸಂಖ್ಯಾತ ಸಮುದಾಯದ ವಿರುದ್ಧ ರೈತರನ್ನು ಎತ್ತಿಕಟ್ಟುವ ಕಾರ್ಯ ನಡೆದಿದೆ. ಇದರ ಪರಿಣಾಮವಾಗಿ ಹಾವೇರಿ ಜಿಲ್ಲೆಯ ಸವಣೂರಿನ ಕಡಗೋಳ ಗ್ರಾಮದಲ್ಲಿ ಅಲ್ಪಸಂಖ್ಯಾತರ ಮನೆ ಅಸ್ತಿಗಳ ಮೇಲೆ ದಾಳಿ ನಡೆದಿದೆ. ಬಿಜೆಪಿ ಅಧಿಕಾರದಲ್ಲಿ ಇರುವಾಗಲೇ ವಕ್ಫ್ ಅದಾಲತ್ ಗಳು ನಡೆದಿದ್ದುವು. 2006ರಲ್ಲಿ ಬಿಜೆಪಿ ಜೆಡಿಎಸ್ ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ ಚಿಕ್ಕಮಗಳೂರು ಗಾವನ ಹಳ್ಳಿ ಕಡೂರಳ್ಳಿಯ ನಾಲ್ಕು ಪ್ರಕರಣಗಳಲ್ಲಿ ರೈತರ ಭೂಮಿಯನ್ನು ವಕ್ಫ್ ಖಾತೆಗೆ ಬದಲಾಯಿಸಲಾಗಿದೆ. 2003 2013ರ ಮದ್ಯೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಯಡಿಯೂರಪ್ಪ ಸದಾನಂದ ಗೌಡ ಮತ್ತು ಜಗದೀಶ್ ಶೆಟ್ಟರ್ ಮುಖ್ಯ




ಮಂತ್ರಿಗಳಾಗಿದ್ದಾಗ ಏಳು ಆಸ್ತಿಗೆ ವಕ್ಫ್ ಎಂದು ನಮೂದು ಮಾಡಲಾಗಿದೆ. ಇದೇ ರೀತಿ 2019/23 ರ ಅವಧಿಯಲ್ಲಿ ಮಾಡಿದ. ಹೀಗೆ ಅನೇಕ ಉದಾಹರಣೆಗಳಿರುವ ಬಗ್ಗೆ ಮಾಧ್ಯಮಗಳಲ್ಲಿ ಪ್ರಕಟವಾಗುತ್ತಿವೆ. ಹೀಗಿರುವಾಗ ಸುಳ್ಳು ವದಂತಿಗಳನ್ನು ಹಬ್ಬಿಸಿ ಗಲಭೆಗೆ ಪ್ರಚೋದನೆ ನೀಡಿ ರಾಜಕೀಯ ಲಾಭ ಪಡೆಯುವ ಹುನ್ನಾರ ಬಿಜೆಪಿ ಮಾಡುತ್ತಿದೆ, ಇದು ಸಮಾಜದ ಸ್ವಾಸ್ಥ್ಯ ಕೆಡಿಸುವ ಷಡ್ಯಂತ್ರವಾಗಿದೆ. ಕದಡಿದ ನೀರಲ್ಲಿ ಮೀನು ಹಿಡಿಯುವ ಕಾಯಕವನ್ನು ಬಿಜೆಪಿ ನಿಲ್ಲಿಸಬೇಕು ಎಂದು ಆಗ್ರಹಿಸಿದ ಅವರು ಜನರು ಇಂತಹ ವದಂತಿಗಳಿಗೆ ಕಿವಿಗೊಟ್ಟು ಪ್ರಚೋದಿತಗೊಂಡು ಬಲಿಪಶುಗಳಾಗಬಾರದು ಯಂದು ಅವರು ಮನವಿ ಮಾಡಿದ್ದಾರೆ.

# ಮೊಬೈಲ್ ಬಿಡಿ, ಟಿ ವಿ ಬಿಡಿ ಪುಸ್ತಕ ಹಿಡಿ: ವಿ.ಟಿ.ಪಡತಾರೆ

**ಜಮಖಂಡಿ:** ಮಕ್ಕಳು ಅತಿಯಾದ ಮೊಬೈಲ್ ಬಳಕೆಯಿಂದ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.ಮೊಬೈಲ್ ಮಕ್ಕಳ ಏಕಾಗ್ರತೆಯ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತಿದೆ ಆದ್ದರಿಂದ ಮಕ್ಕಳು ಮೊಬೈಲ್ ಮತ್ತು ಟಿವಿ ಬಳಕೆ ಕಡಿಮೆ ಮಾಡಿ ಪುಸ್ತಕ ಹಿಡಿಯಬೇಕು ಎಂದು ಜಿ.ಜಿ.ಕಾಲೇಜಿನ ಉಪನ್ಯಾಸಕ ವಿ.ಟಿ.ಪಡತಾರೆ ಹೇಳಿದರು. ಅವರು ಸರಕಾರಿ ಪ್ರೌಢಶಾಲೆ ಕುಂಬಾರಹಳ್ಳದ ಸಮುದಾಯದತ್ತ ಶಾಲಾ ಕಾರ್ಯಕ್ರಮದ ನೊಡೆಲ್ ಅಧಿಕಾರಿಯಾಗಿ ಆಗಮಿಸಿ ಪಾಲಕರ ಸಭೆಯಲ್ಲಿ ಮಾತನಾಡುತ್ತಾ ಕೆಲವೇ ವರ್ಷಗಳಲ್ಲಿ ಕುಂಬಾರಹಳ್ಳ ಪ್ರೌಢ ಶಾಲೆ ಪ್ರಖ್ಯಾತಿಯನ್ನು ಗಳಿಸಿದೆ .ಇಲ್ಲಿಯ ಫಲಿತಾಂಶ ಪ್ರತಿವರ್ಷ ಚೆನ್ನಾಗಿ ಬರುತ್ತಿದೆ. ಈ ವರ್ಷವೂ ಚೆನ್ನಾಗಿ ಬರಬೇಕಾದರೆ ಮಕ್ಕಳು *ಮೊಬೈಲ್ ಬಿಡಿ,ಪುಸ್ತಕ ಹಿಡಿ ತತ್ತ್ವವನ್ನು ಅನುಸರಿಸಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶಿಕ್ಷಕ ಸಂಗನಬಸವ ಉಟಗಿ ನಾವು ಮಕ್ಕಳ ಪ್ರಗತಿಗಾಗಿ ಸದಾ ಶ್ರಮಿಸಲು ಸಿದ್ಧ, ನಮ್ಮ ಜೊತೆಪಾಲಕರು ಕೈಜೋಡಿಸಬೇಕು,ಮಕ್ಕಳ ಅಭ್ಯಾಸದ ಕುರಿತು ಗಮನಹರಿಸಬೇಕು. ಪಾಲಕರು ಮಕ್ಕಳ ಏಳಿಗೆಗಾಗಿ ಶಾಲೆಯ ಜೊತೆ ನಿರಂತರ ಸಂಪರ್ಕದಲ್ಲಿರಬೇಕು




ಎಂದರು.

ಹತ್ತನೆಯ ವರ್ಗ ಶಿಕ್ಷಕ ಸಂಜೀವ ಝುಂಬುರೆ ಮಾತನಾಡಿ ಮಕ್ಕಳ ಪ್ರಗತಿಯ ಕುರಿತು ಸಂಪೂರ್ಣ ಮಾಹಿತಿ ನೀಡಿದರು. ಮಕ್ಕಳ ಅಭ್ಯಾಸದ ರೂಪುರೇಷೆಗಳ ಕುರಿತು ಚರ್ಚಿಸಿದರು.

ಶಿಕ್ಷಕಿ ಶಾರದಾ ಮಠ ಮಾತನಾಡಿ ಒಂಭತ್ತನೆಯ ವರ್ಗದ ಮಕ್ಕಳಿಗಾಗಿ ಹಮ್ಮಿಕೊಂಡ ಎಫ್.ಎಲ್.ಎನ್ ಮತ್ತು ಮರುಸಿಂಚನದ ಮಾಹಿತಿ ನೀಡಿದರು. ಮಕ್ಕಳ ಕಲಿಕೆಗೆ ಒತ್ತುಕೊಡುವಂತೆ ಹೇಳಿದರು.

ದೈಹಿಕ ಶಿಕ್ಷಕ ಬಾಹುಬಲಿ ಮುತ್ತೂರ ಮಾತನಾಡಿ ಮಕ್ಕಳು ಬೆಳಿಗ್ಗೆ ಬೇಗ ಏಳಬೇಕು, ವೇಳಾಪತ್ರಿಕೆಯಂತೆ ಅಭ್ಯಾಸ ಮಾಡಬೇಕು ಎಂದು ಹೇಳಿದರು.

ಶಿಕ್ಷಕಿ ಸವಿತಾ ಬೆನಕಟ್ಟಿ ಮಕ್ಕಳಿಗೆ ಮನೆಯಲ್ಲಿ ಕಡಿಮೆ ಕೆಲಸ ಹಚ್ಚುವಂತೆ ಸಲಹೆ ನೀಡಿದರು.

ಪಾಲಕರ ಪರವಾಗಿ ಮಾತನಾಡಿದ ನಿಂಗವ್ವಾ ಮಾಳಿ ಮಕ್ಕಳ ಶಿಕ್ಷಣ ಫಲಪ್ರದವಾಗಲು ಊರಿನವರ ಸಹಕಾರ ಅತ್ಯಗತ್ಯ. ಊರಿನವರು ಸ್ವಚ್ಛತೆಗೆ ಹೆಚ್ಚಿನ ಗಮನ ಹರಿಸಬೇಕು, ಶಾಲೆಗೆ ಬೇಕಾಗುವ ಸೌಕರ್ಯಗಳನ್ನು ಒದಗಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಮಖ್ಯೋಪಾಧ್ಯಾಯ ನಾರಾಯಣ ಶಾಸ್ತ್ರಿ *ಇಷ್ಟೊಂದು ಸಂಖ್ಯೆಯಲ್ಲಿ ಬಂದ ಪಾಲಕರ ಮಕ್ಕಳ ಮೇಲಿನ ಕಾಳಜಿ ಬಹು ದೊಡ್ಡದು, ನಾವೆಲ್ಲರೂ ಸೇರಿ ಎಲ್ಲಾ ಮಕ್ಕಳು ಉತ್ತೀರ್ಣರಾಗುವಂತೆ ಮಾಡೋಣ, ಮನೆಯಲ್ಲಿ ಟಿ.ವಿ.ಯನ್ನು ಬಂದು ಮಾಡಿರಿ, ಮಕ್ಕಳಿಗಾಗಿ ನೀವೂ ತ್ಯಾಗ ಮಾಡಿರಿ ,ಶಿಕ್ಷಕ ಬಾಲಕ ಪಾಲಕರ ತ್ರಿವೇಣಿ ಸಂಗಮದಲ್ಲಿ ಪ್ರಗತಿಯನ್ನು ಸಾಧಿಸೋಣ ಎಂದರು.

ಇದೇ ಸಂದರ್ಭದಲ್ಲಿ ತಾಲೂಕಾ ಮಟ್ಟದ ಪ್ರತಿಭಾ ಕಾರಂಜಿಯಲ್ಲಿ ಚರ್ಚಾಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ನಿಂಗವ್ವಾ ಮರನೂರ ಮತ್ತು ಕವನ ವಾಚನದಲ್ಲಿ ದ್ವಿತೀಯ ಸ್ಥಾನ ಪಡೆದ ಪೂಜಾ ಚಿಗರಿ ಇವರಿಗೆ ಬಹುಮಾನ ನೀಡಲಾಯಿತು.

ಎಸ್.ಎಸ್.ಎಲ್.ಸಿಯಲ್ಲಿ ಉತ್ತಮ ಸಾಧನೆ ತೋರುತ್ತಿರುವ ಪ್ರಿಯಾ ಮಿರ್ಜಿ ಮತ್ತು ಲಕ್ಷ್ಮಣ ತೇರದಾಳ ಇವರಿಗೆ ಬಹುಮಾನ ನೀಡಲಾಯಿತು.

ಸಭೆಯಲ್ಲಿ ಗ್ರಾಮ ಪಂಚಾಯತಿಯ ಮಾಜಿ ಅಧ್ಯಕ್ಷರಾದ ದುಂಡಪ್ಪ ಬಾಡಗಿ, ನಿಂಗಪ್ಪ ತೇರದಾಳ,ಸದಾಶಿವ ಮರನೂರ, ಪರಸಪ್ಪ ನಾಯಕ್, ಸದಾಶಿವ ಎಂಟೆತ್ತ, ನಿಂಗವ್ವ ಹಿರೇಕುರುಬರ ಶಿಕ್ಷಕರಾದ ಎ.ಎಂ. ಮೋಮಿನ್ ಮತ್ತು ಎಸ್.ಎಸ್.ಬಿರಾದಾರ ಹಾಗೂ ನೂರಕ್ಕೂ ಅಧಿಕ ಪಾಲಕರು ಪಾಲ್ಗೊಂಡಿದ್ದರು.

ಶಿಕ್ಷಕಿ ಶಾರದಾ ಮಠ ಕಾರ್ಯಕ್ರಮ ನಿರ್ವಹಿಸಿದರು. ಶಿಕ್ಷಕ ಚಂದ್ರಕಾಂತ ಪೋಲಿಸ್ ವಂದಿಸಿದರು.

## ಸರ್ಕಾರದಿಂದ ನಾಮ ನಿರ್ದೇಶನಗೊಂಡ ವಿವಿಧ ಸದಸ್ಯರಿಗೆ ಸನ್ಮಾನ



**ಕೊಪ್ಪಳ :** ದೀಪಾವಳಿ ಹಬ್ಬದ ಪ್ರಯುಕ್ತ ಲಕ್ಷ್ಮಿ ಪೂಜೆ ಕಾರ್ಯಕ್ರಮದಲ್ಲಿ ಕೊಪ್ಪಳದ ವಿವಿಧ ಗಣ್ಯರಿಗೆ ವಿವಿಧ ಸಮಿತಿಗಳಿಗೆ ಸರ್ಕಾರದಿಂದ ನಾಮನಿರ್ದೇಶನಗೊಂಡ ಜನಪ್ರತಿನಿಧಿ ಸದಸ್ಯರಿಗೆ ಮಂಜುನಾಥ್, ಅರೆಕೇರಿ ಮತ್ತು ದಶರಥ ಅರ–ಕೇರಿ ಸಹೋದರರು ಸೇರಿ ಅವರ ನಿವಾಸದಲ್ಲಿ ಕುಟುಂಬದ ಪರವಾಗಿ ಸನ್ಮಾನಿಸಿದರು, ಹಾಗೂ ನೂತನ ಸದಸ್ಯರಿಗೆ ಶುಭ ಕೋರಿ ನಿಮ್ಮ ಸೇವಾವಧಿಯಲ್ಲಿ ಸಾರ್ವಜನಿಕರಿಗೆ ಹೆಚ್ಚು ಹೆಚ್ಚು ಅನುಕೂಲ ದೊರೆಯಲ್ಲಿ ಸರ್ಕಾರದಿಂದ ಸಿಗಬಹುದಾದ ಸಹಾಯ ಸೌಕರ್ಯಗಳನ್ನು ಜನರಿಗೆ ದೊರಕಿಸಿ ಕೊಡುವ ನಿಟ್ಟಿನಲ್ಲಿ ತಾವೆಲ್ಲರೂ ಶ್ರಮಿಸಲಿ ಎಂದು ಆಶಯ ವ್ಯಕ್ತಪಡಿಸಿ ಅವರನ್ನು ಸನ್ಮಾನಿಸಿದರು

ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ನೂತನ ಸದಸ್ಯರಾದ ಬಾಶುಸಾಬ್ ಕತಿಬ್, ಕೊಪ್ಪಳ ನೂತನವಾಗಿ ಆಶ್ರಯ ಕಮಿಟಿ ಸದಸ್ಯರಾಗಿ ಸರ್ಕಾರದಿಂದ ನಾಮನಿರ್ದೇಶನಗೊಂಡ ದಲಿತ ಸಮುದಾಯದ ಯುವ ನಾಯಕ ಪರಶುರಾಮ ಕೆರೆ ಹಳ್ಳಿ ,ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರಾಗಿ ನೇಮಕಗೊಂಡ ಕಲಾವಿದ ಚಾಂದ್ ಪಾಷಾ ಖಿಲ್ಲೇದಾರ ಮತ್ತು ಕೇಂದ್ರ ಸರ್ಕಾರದ 15 ಅಂಶಗಳ ಕಾರ್ಯಕ್ರಮಗಳ ಅನುಷ್ಠಾನ ಸಮಿತಿ ಸದಸ್ಯರಾದ ಮಾನ್ವಿ ಪಾಶಾ ಅಲ್ಲದೆ ಅರ್ಬನ್ ಬ್ಯಾಂಕ್ ಆಡಳಿತ ಮಂಡಳಿ ಅಧ್ಯಕ್ಷರಾದ ರಾಜಶೇಖರ್ ಅಡೂರ್ ಮತ್ತಿತರರಿಗೆ ಸನ್ಮಾನಿಸಲಾಯಿತು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State